ಕರ್ನಾಟಕ ಸರ್ಕಾರ

# ಸಿರಿ ಕನ್ನಡ

## ಪ್ರಥಮ ಭಾಷಾ ಕನ್ನಡ ಪಠ್ಯಪುಸ್ತಕ

## ಭಾಗ–2

@KTBS NOT TO BE REPUBLISHED

# ಐದನೆಯ ತರಗತಿ

ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
೭ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–೫೬೦ ೦೦೩.

# ಪರಿವಿಡಿ

S5B4HZ


| ಕ್ರ.ಸಂ. | ಪಾಠದ ಶೀರ್ಷಿಕೆಗಳು | ಕೃತಿಕಾರರು | ಪುಟ ಸಂಖ್ಯೆ |
|---|---|---|---|
| | **ಗದ್ಯ ಭಾಗ** | | |
| ೫. | ಪಂಜರಶಾಲೆ | ಬಿ. ವಿ. ಕಾರಂತ | ೧ |
| ೬. | ಮಲ್ಲಜ್ಜಿಯ ಮಳಿಗೆ | ಸಮಿತಿ ರಚನೆ | ೯ |
| ೭. | ಧೀರ ಸೇನಾನಿ | ಬಸವರಾಜ ಹದ್ಲಿ | ೧೬ |
| ೮. | ಸಂಗೊಳ್ಳಿ ರಾಯಣ್ಣ | ಎಚ್.ಎಸ್. ಸತ್ಯನಾರಾಯಣ | ೨೨ |
| | **ಪದ್ಯ ಭಾಗ** | | |
| ೫. | ಕರಡಿ ಕುಣಿತ | ದ. ರಾ. ಬೇಂದ್ರೆ | ೨೯ |
| ೬. | ಮಗುವಿನ ಮೊರೆ | ಸಿದ್ಧಯ್ಯ ಪುರಾಣಿಕ | ೩೪ |
| ೭. | ಮೂಡಲ ಮನೆ | ಚಂದ್ರಶೇಖರ ಕಂಬಾರ | ೩೭ |
| ೮. | ಭುವನೇಶ್ವರಿ | ಬಿ.ವಿ. ಸತ್ಯನಾರಾಯಣರಾವ್ | ೪೩ |
| | **ಪೂರಕ ಪಾಠಗಳು** | | |
| ೩. | ನನ್ನ ರಟ್ಟೆಯ ಬಲ (ಪದ್ಯ) | ಬುದ್ದಣ್ಣ ಹಿಂಗಮಿರೆ | ೪೯ |
| ೪. | ಮೆಚ್ಚಿನ ಗೊಂಬೆ (ಗದ್ಯ) | ಸಮಿತಿ ರಚನೆ | ೫೧ |
| ೫. | ಹಿನ್ನುಡಿ (ಪದ್ಯ) | ದಿನಕರ ದೇಸಾಯಿ | ೫೩ |


©KTBS NOT TO BE REPUBLISHED

# ೫. ಪಂಜರ ಶಾಲೆ

– ಬಿ. ವಿ. ಕಾರಂತ

E2S3C9

**ಪ್ರವೇಶ :** "ಪಂಜರದೊಳಗಿಟ್ಟು ನಯ, ವಿನಯ ಕಲಿಸಿ" ಎಂಬ ರಾಜಾಜ್ಞೆಯ ಕ್ರೌರ್ಯ ಮತ್ತು ಸ್ವತಂತ್ರ, ಸ್ವಚ್ಛಂದವಾಗಿ ಬದುಕಿದ ಹಾಡುಹಕ್ಕಿಯ ತೊಳಲಾಟ ಈ ನಾಟಕದಲ್ಲಿ ಮನೋಜ್ಞವಾಗಿ ಮೂಡಿ ಬಂದಿದೆ. ಕಾಡಿನಲ್ಲಿ ಸಿಕ್ಕ ಗಿಳಿಯನ್ನು ರಾಜನು ಬಂಧಿಸಿ ಪಂಜರದೊಳಗಿಟ್ಟು ಬಲವಂತದ ಶಿಕ್ಷಣ, ಸಂಸ್ಕೃತಿ ಕಲಿಸುವ ಆದೇಶ ಮಾಡುತ್ತಾನೆ. ಯಾರನ್ನೇ ಆಗಲಿ ಪಂಜರದೊಳಗಿಟ್ಟು ಒತ್ತಡದಿಂದ ಏನನ್ನು ಕಲಿಸಲು ಸಾಧ್ಯವಿಲ್ಲ ಎಂಬುದು ಈ ನಾಟಕದ ಆಶಯವಾಗಿದೆ.

© KTBS NOT TO BE REPUBLISHED

(ವಸಂತದ ವೈಭವ; ರಾಜೋದ್ಯಾನ, ಹಿನ್ನೆಲೆಯಲ್ಲಿ ಆಲಾಪ, ಅನಂತರ–ಗಿಳಿವಿಂಡು ವಿಹರಿಸಿ ಹೊರಡಲು ಸಿದ್ಧವಾಗುತ್ತಿರುವಷ್ಟರಲ್ಲಿ ಒಂದು **ಗಿಳಿಮರಿ** ಹಣ್ಣು ತೂಗಿ ಬಾಗಿದ ಗಿಡವೊಂದನ್ನು ಕಂಡು ಸಂತೋಷದಿಂದ ಹುಚ್ಚೆದ್ದು ಕೂಗುವುದು.)

**ಗಿಳಿಮರಿ** : ಬನ್ನಿ ಬನ್ನಿ, ಮಧುಫಲ ತಿನ್ನಿ. ಬೇಗ, ಹಾರಿ ಬನ್ನಿ.
[ಅಲ್ಲಿವರೆಗೆ ನಿದ್ರೆಮಾಡುತ್ತಿದ್ದ ಉದ್ಯಾನ ರಕ್ಷಕರು ಕೂಗಿಗೆ ಎಚ್ಚೆತ್ತು ಓಡಿ ಬರುವರು.]

**ರಕ್ಷಕರು** : ಹಿಡಿಯಿರಿ, ಬಡಿಯಿರಿ, ಹಣ್ಣುಗಳ್ಳರನ್ನು ಬಡಿದೋಡಿಸಿರಿ.
[ಗಿಳಿವಿಂಡು ಹೆದರಿ ಚೆಲ್ಲಾಪಿಲ್ಲಿ ಓಡತೊಡಗುವುವು. ರಕ್ಷಕರು ಕೋಲಿನಿಂದ ನೆಲಬಡಿಯುತ್ತ ಅಟ್ಟಿಸುವರು.]

**ರಕ್ಷಕ ೧** : ಹಾಂ, ಸದೆಬಡಿಯಿರಿ, ಬಿಡಬೇಡಿ. ಒಂದು ಪಿಳ್ಳೆಯೂ ಹಾರಿ ಹೋಗದಿರಲಿ.
[ರಕ್ಷಕರ ಕೈಗಾಗಲೀ ಬಲೆಗಾಗಲೀ ಸಿಕ್ಕದೆ ಗಿಳಿಗಳು ತಪ್ಪಿಸಿಕೊಂಡು ಹಾರಿ ಹೋಗುವುವು. ರಕ್ಷಕರು ಮೇಲುಸಿರು ಬಿಡುತ್ತ ಕೂತುಕೊಳ್ಳುವರು.
ಮರಿಗಿಳಿಯೊಂದು ಮಾತ್ರ ಪರಿವೆಯೇ ಇಲ್ಲದೆ ಹಣ್ಣು ತಿನ್ನುವುದರಲ್ಲಿ ಮಗ್ನವಾಗಿದೆ.]

**ಗಿಳಿಮರಿ** : ಅಣ್ಣ, ಅಮ್ಮ, ಬನ್ನಿ ಬನ್ನಿ. ಟೇಂ ಟೇಂ. ಚಿಕ್ಕಪ್ಪ ದೊಡ್ಡಪ್ಪ, ಹಣ್ಣು ತಿನ್ನಿ. ಟೇಂ ಟೇಂ.
ಎಲ್ಲಾ ಹಣ್ಣೂ ನಮ್ದೇ ನಮ್ದೇ ಎಲ್ಲಾ ಹಣ್ಣು .. ಟೇಂ ಟೇಂ .
[ದಣಿದು ಕೂತ ರಕ್ಷಕರ ಕಿವಿ ನೆಟ್ಟಗಾಗುವುದು, ಹುಡುಕಲು ಪ್ರಾರಂಭಿಸುವರು.]

**ರಕ್ಷಕ ೧** : ಹಣ್ಣುಗಳ್ಳ ಇಲ್ಲೇ ಎಲ್ಲೋ ಇದ್ದಾನೆ, ಹುಡುಕೋ ಹುಡುಕೋ. [ಹುಡುಕುವರು]

**ಗಿಳಿಮರಿ** : ಟೇಂ ಟೇಂ ಬನ್ನಿ ಬನ್ನಿ.

**ರಕ್ಷಕ ೨** : ಅಕೋ! ತೋಟಗಳ್ಳ ಕೊನೆಗೂ ಸಿಕ್ಕ! ಹಿಡಿಯೋ ಬಡಿಯೋ! [ರಕ್ಷಕರು ಗಿಳಿಯನ್ನು ಸುತ್ತುಗಟ್ಟುವರು.]

**ರಕ್ಷಕ ೧** : ರಾಜನ ತೋಟ ಹಾಳುಮಾಡ್ತೀ?



ರಕ್ಷಕ ೨ : ದೊರೇ ತೋಟದ ಹಣ್ಣು ತಿನ್ತೀ?

ರಕ್ಷಕ ೧ : ಇವತ್ತು ನಿನಗೆ ಕೋಲುಪೂಜೆ!

ರಕ್ಷಕ ೨ : ಕಿತ್ತುಬಿಡ್ತೋನ ರೆಕ್ಕೆ ಪುಕ್ಕ!

ರಕ್ಷಕ ೧ : ಮೂರ್ಖರ ಮೂರ್ಖ ಗಿಳಿಯಪ್ಪ!

ರಕ್ಷಕ ೨ : ಹೆಡ್ಡರ ಹೆಡ್ಡ ತುಡುಗಪ್ಪ!

ರಕ್ಷಕ ೧ : ಮುಗೀತು ಇವತ್ತು ನಿನ್ನ ಕಥೆ!

ರಕ್ಷಕ ೨ : ತಿನ್ನೋದು ನಿಲ್ಸೋ ಗಿಳಿಪಿಳ್ಳೆ !

ರಕ್ಷಕ ೧ : ಗೊತ್ತೇ ನಿನಗೆ ತೋಟ ಯಾರದು?

ರಕ್ಷಕ ೨ : ನಿಮ್ಮ ತಾತಂದೇ?

ರಕ್ಷಕ ೧ : ನಿಮ್ಮಪ್ಪಂದೇ?

ರಕ್ಷಕ ೨ : ನಮ್ಮ ರಾಜಂದು !

ರಕ್ಷಕ ೧ : ಈ ಮರ ಈ ಗಿಡ, ಹೂವು ಹಣ್ಣು ...

ರಕ್ಷಕ ೨ : ಎಲ್ಲಾ ನಮ್ಮ ರಾಜಂದು !

ರಕ್ಷಕ ೧ : ಎಂಥಾ ರಾಜ ಗೊತ್ತೇ ನಿಂಗೆ ? ರಾಜಾಧಿರಾಜ

ರಕ್ಷಕ ೨ : ಸಾವಿರ ಸಾವಿರ ಸೇನೆಯ ರಾಜ!

ಗಿಳಿಮರಿ : ಬನ್ರೋ, ಬನ್ರೊ ನಮ್ಮದು ಹಣ್ಣು, ಹಣ್ಣು ತಿನ್ನೋವನದೇ ಹಣ್ಣಿನ ತೋಟ!

ರಕ್ಷಕ ೧ : ಏ ಮರಿಪಿಳ್ಳೆ, ರಾಜನ ಭಯ ಇಲ್ವೇನೋ ನಿಂಗೆ.

ರಕ್ಷಕ ೨ : ರಾಜಂದು ಹೋಗ್ಲಿ, ನಮ್ಮ ಭಯಾನೂ ಇಲ್ಲೇನೋ.

ರಕ್ಷಕ ೧ : ಹೋಗ್ಲಿ. ಈ ಕೋಲಿನ ಭಯ ?

ರಕ್ಷಕ ೨ : ಹಿಡಿಯೋ, ಬಲೆ ಹಾಕೋ,

[ಬಲೆ ಬೀಸುವರು, **ಗಿಳಿಮರಿ** ಬಲೆಯೊಳಗೆ ಸಿಕ್ಕಿ ಬೀಳುವುದು]

[ನೇಪಥ್ಯದಲ್ಲಿ ವಂದಿಮಾಗಧರ ಧ್ವನಿ, ಕ್ರಮೇಣ ಅವರು ರಂಗವನ್ನು ಪ್ರವೇಶಿಸುವರು.]

@KTBS NOT TO BE REPUBLISHED

ವಂದಿಗಳು : ಸಾವಧಾನ, ಸಾವಧಾನ.... ಮಹಾಕರುಣಾಳು ಖಗಮೃಗ ಕೃಪಾಳು ಗಿಡಮರದಯಾಳು ವಿದ್ಯಾವಂತ ಪ್ರಜ್ಞಾವಧಾನಿ ಕಣಕಣಕೂ ವಿದ್ಯಾದಾನಿ ವಾಚಾಳಪುರವರಾಧೀಶ್ವರ ರಾಜಾಧಿರಾಜ ರಾಜಮಾರ್ತಾಂಡರು ದಯಮಾಡಿಸುತ್ತಿದ್ದಾರೆ, ಭೋ ಪರಾಕ್....
[ಗಿಳಿಮರಿ ಬಿಡಿಸಿಕೊಳ್ಳಲು ಒದ್ದಾಡುತ್ತಿದೆ. ಟೇಂ ಟೇಂ ಎಂದು ಕಿರಿಚುತ್ತದೆ. ಅಷ್ಟರಲ್ಲಿ ರಾಜ, ಮಂತ್ರಿ, ರಾಜನ ಅಳಿಯ ಪ್ರವೇಶಿಸುವರು.]

ಗಿಳಿಮರಿ : ಟೇಂ...ಟೇಂ...

ರಾಜ : (ಆಶ್ಚರ್ಯದಿಂದ) ಇದೇನು ಒದರುತ್ತಿದೆ?

ಗಿಳಿಮರಿ : ಟೇಂ.....ಟೇಂ.....

ರಾಜ : ಯಾವ ಭಾಷೆ ಮಾತಾಡ್ತಾ ಇದೆ? ಪ್ರಾಕೃತ ಭಾಷೆ? ಪಿಶಾಚ ಭಾಷೆ?

ಗಿಳಿಮರಿ : ಟೇಂ...

ರಾಜ : (ರೇಗಿ, ಮಂತ್ರಿಯ ಕಡೆ) ಏನಿದರ ಅರ್ಥ?

ವಂದಿಗಳು : ಟೇಂ (ಮಂತ್ರಿ ಸನ್ನೆ ಮಾಡಲು ಗಪ್ಪನೆ ಬಾಯಿಮುಚ್ಚುವರು.)

ಮಂತ್ರಿ : ರಾಜಾಧಿರಾಜ, ಇದೊಂದು ಗಿಳಿಮರಿ. ಕಾಡುಜಾತಿ, ಅನಾಗರಿಕ, ವಸಂತಕಾಲಕ್ಕೆ ಮದ ಹತ್ತಿ ರಾಜತೋಟಕ್ಕೆ ನುಗ್ಗಿ ಹಣ್ಣುಹಂಪಲುಗಳನ್ನು ನಾಶಪಡಿಸಿದೆ.

ರಾಜ : ಇದಕ್ಕೆ ಮಾತು ಬರುತ್ತದೆಯೆ?

ಮಂತ್ರಿ : ಇಲ್ಲ.

ರಾಜ : ಹಾಡು ಬರುತ್ತದೆಯೆ?

ಮಂತ್ರಿ : ಇಲ್ಲ.

ರಾಜ : ಓದು ಬರುತ್ತದೆಯೆ?

ಮಂತ್ರಿ : ಇಲ್ಲ.

ರಾಜ : ನೃತ್ಯ ಬರುತ್ತದೆಯೆ?

ಮಂತ್ರಿ : ಇಲ್ಲ.

ರಾಜ : ತರ್ಕ, ಶಾಸ್ತ್ರ, ಪುರಾಣ, ವ್ಯಾಕರಣ?

ಮಂತ್ರಿ : ಯಾವುದೂ ಬರೋದಿಲ್ಲ.

ರಾಜ : ಮತ್ತೇನು ಬರುತ್ತದೆ? ಜೀವನವೆಲ್ಲ ಏನು ಮಾಡುತ್ತದೆ?

ಗಿಳಿಮರಿ : ಟೇಂ...ಟೇಂ...

ಮಂತ್ರಿ : ಮಹಾಪ್ರಭು, ಈ ಗಿಳಿ ಅರಣ್ಯವಾಸಿ, ನಿರಕ್ಷರಕುಕ್ಷಿ; ತೀರಾ ಅಸಂಸ್ಕೃತ. ಸಂಗೀತವಿಲ್ಲ, ನೃತ್ಯವಿಲ್ಲ, ಗದ್ಯಪದ್ಯದ ಭೇದ ಗೊತ್ತಿಲ್ಲ, ಒಂದು ಎರಡರ ಮಗ್ಗಿ ಕೂಡಾ ಬರೋದಿಲ್ಲ, ಇದಕ್ಕೆ ಬರೋದು ಒಂದೇ– ಗಿಡಮರ ಹತ್ತಿ ಕೊಂಬೆ ಮುರಿದು ಹಣ್ಣು ತಿನ್ನೋದು, ಉದುರಿಸೋದು, ಆಮೇಲೆ....

ಗಿಳಿಮರಿ : ಟೇಂ...ಟೇಂ...

ಮಂತ್ರಿ : ಹಾಗನ್ನೋದು.

ರಾಜ : ಪಾಪ ಪಾಪ!
[ರಕ್ಷಕರು, ವಂದಿಗಳು 'ಅಯ್ಯೋ ಪಾಪ' ಎಂದು ದನಿಗೂಡಿಸುವರು.]

ಗಿಳಿಮರಿ : ಟೇಂ...ಟೇಂ...

ರಾಜ : ಛೀ ಛೀ ಛೀ! ಬರೇ ಹಣ್ಣು ತಿನ್ನೋದೊಂದೇ ಗೊತ್ತೆ ? ಮಹಾವಾಚಾಳ ನಗರೋದ್ಯಾನದಲ್ಲಿ ಬಂದು ಹಣ್ಣು ತಿನ್ನೋದು ಮಾತ್ರ ಗೊತ್ತೆ? ವಂದಿಮಾಗಧರೆ–

@KTBS NOT TO BE REPUBLISHED

**ವಂದಿಗಳು** : ಮಹಾಕರುಣಾಳು ಖಗಮೃಗಕೃಪಾಳು ಗಿಡಮರದಯಾಳು ವಿದ್ಯಾವತಂಸ ಪ್ರಜ್ಞಾವಧಾನಿ ಕಣಕಣಕೂ ವಿದ್ಯಾದಾನಿ ಮಹಾವಾಚಾಳಪುರ–

**ರಾಜ** : ಈ ಸಭ್ಯ ಸುಶಿಕ್ಷಿತ ನಾಗರಿಕ ರಾಜ್ಯದಲ್ಲಿ ಈ ಅನಾಗರಿಕ ಪಕ್ಷಿ! ರಾಜ ತೋಟದಲ್ಲಿ ನಿರಕ್ಷರ ಕುಕ್ಷಿ ! ಮತ್ತೆ ಇದಕ್ಕೆ ನೀವೇ ಸಾಕ್ಷಿ !... ಮಂತ್ರಿ, ಈ ಅಸಭ್ಯ ಪಕ್ಷಿಯನ್ನು ರಾಜಶಾಲೆಗೆ ಸೇರಿಸತಕ್ಕದ್ದು. ರಾಜಾಧ್ಯಾಪಕರಿಂದ ಇದಕ್ಕೆ ಶಿಕ್ಷಣ ಕೊಡಿಸು. ಈ ಅನಾಗರಿಕ ಶುಕಪಕ್ಷಿಯ ಆದಿಮ ಪ್ರವೃತ್ತಿಗಳನ್ನು ಸುಧಾರಿಸಿ ಆಧುನಿಕ ಮಾಡತಕ್ಕದ್ದು.

**ಮಂತ್ರಿ** : ಅಪ್ಪಣೆ ಪ್ರಭು.

**ರಾಜ** : ಇದು ಸಭ್ಯತೆ ಕಲಿಯಲಿ, ಕಾಡುತನ ಮರೆಯಲಿ. ಶಾಸ್ತ್ರ ವ್ಯಾಕರಣ ಕಲಿತು ಸುಶಿಕ್ಷಿತವಾಗಲಿ. ತಾನು ಸುಸಂಸ್ಕೃತವಾಗಲಿ. ತಾನು ಸುಸಂಸ್ಕೃತನಾಗಿ ಕಾಡಿನ ಉಳಿದ ಶುಕಪಕ್ಷಿಗಳನ್ನು ಸಭ್ಯ ಮಾಡಲಿ.

**ಮಂತ್ರಿ** : ಅಪ್ಪಣೆ ಪ್ರಭು.

**ಅಳಿಯ** : ಮಹಾರಾಜ, ರಾಜಮಾವ, ನನ್ನದೊಂದು ನಮ್ರ ನಿವೇದನೆ; ಇದನ್ನು ರಾಜಶಾಲೆಗೆ ಸೇರಿಸುವ ಮೊದಲು ಒಂದು ಮುಖ್ಯ ತಥ್ಯವನ್ನು ಕಂಡುಹಿಡಿಯಬೇಕು. ಇದರ ಅಸಭ್ಯತೆಗೆ ಮತ್ತು ಅವಿದ್ಯೆಗೆ ಮೂಲಕಾರಣವನ್ನು ಕಂಡುಹಿಡಿಯಬೇಕು. ಈ ಗಿಳಿಮರಿ ತಿನ್ನೋದೇನು, ಕುಡಿಯೋದೇನು, ಇದರ ಆವರಣ ಎಂಥದು, ಇದು ಇರೋದೆಲ್ಲಿ, ಹಾರೋದೆಲ್ಲಿ, ಇದರ ರೆಕ್ಕೆ ಪುಕ್ಕ ಕೊಕ್ಕುಗಳ ಉದ್ದಗಲವೆಷ್ಟು, ಭಾರವೆಷ್ಟು–ಈ ಅಂಶಗಳ ಬಗ್ಗೆ ದೀರ್ಘಸಂಶೋಧನೆ ನಡೆಯಬೇಕು.

© KTBS NOT TO BE REPUBLISHED



**ಮಂತ್ರಿ** : ಪ್ರಭು, ಯುವರಾಜ ಅಳಿಯದೇವರು ಮಹಾ ಪ್ರತಿಭಾಶಾಲಿಗಳು, ದೇಶಕೋಶ ಸುತ್ತಿ ಬಂದವರು. ವಿದೇಶಗಳಿಂದ ಪದವಿಗಳನ್ನು ಹೊತ್ತು ತಂದವರು. ಕಾಂಭೋಜದೇಶದಲ್ಲಿ ಪ್ರಾಣಿಶಾಸ್ತ್ರ, ಪಕ್ಷಿಶಾಸ್ತ್ರ ಪಾರಂಗತರಾದವರು. (ದನಿ ತಗ್ಗಿಸಿ) ಸದ್ಯ ನಿರುದ್ಯೋಗಿಗಳು. ಅದಕ್ಕೇ ಒಂದು ವಿನಂತಿ–ಅಳಿಯರಾಜರಿಗೇ ಶುಕಶಿಕ್ಷಣದ ಭಾರವನ್ನು ವಹಿಸಿಬಿಡಬಹುದು.

**ರಾಜ** : ವಿನಂತಿಯನ್ನು ಸ್ವೀಕರಿಸಿದ್ದೇವೆ. ಅಳಿಯರಾಜ, ಇಂದಿನಿಂದ ನೀನು ಶುಕಶಿಕ್ಷಣದ ಮಂತ್ರಿ.

**ಅಳಿಯ** : ಮಹಾರಾಜ, ರಾಜಮಾವ, ಇನ್ನೊಂದು ವಸಂತ ಬರುವುದರೊಳಗಾಗಿ ಈ ಕಾಡುಗಿಳಿ ತನ್ನ ವನ್ಯವ್ಯವಹಾರಗಳನ್ನು ಮರೆತಿರಬೇಕು, ಸಭ್ಯ ಸುಶಿಕ್ಷಿತ ಸುಸಂಸ್ಕೃತವಾಗಿರಬೇಕು. ಇದಕ್ಕಾಗಿ ನಮ್ಮ ವಿಶ್ವವಿದ್ಯಾಲಯದಲ್ಲಿ ಒಂದು ಶುಕ ಅಧ್ಯಯನ ಸಂಸ್ಥೆಯನ್ನು ಸ್ಥಾಪಿಸಬೇಕು.

**ರಾಜ** : ನಿನ್ನ ಕಾರ್ಯದಲ್ಲಿ ಜಯವಾಗಲಿ. ಮಂತ್ರಿ, ಡಂಗುರ ಹೊಡೆಯಿಸು.ರಾಜ್ಯದ ಮೂಲೆ ಮೂಲೆಯ ಪ್ರತಿಯೊಬ್ಬ ಪ್ರಜೆಗೂ ಗೊತ್ತಾಗಲಿ–ಅಲ್ಪವಾದ ಒಂದು ಪಕ್ಷಿಯ ಶಿಕ್ಷಣದಲ್ಲೂ ರಾಜರ ಆಸಕ್ತಿ ಎಷ್ಟಿದೆ ಎನ್ನುವುದು. ನಮ್ಮ ಪುತ್ರಿಯೂ ಸಂತುಷ್ಟಳಾಗಲಿ, ಅಳಿಯರಾಜ ಶುಕಶಿಕ್ಷಣ ಮಂತ್ರಿಯಾದನೆಂದು. [ರಾಜ ವಂದಿಗಳ ಕಡೆ ನೋಡುತ್ತಾನೆ. ಅವರು ಪುನಃ ಪರಾಕು ಹೇಳುತ್ತ ನಿರ್ಗಮಿಸುತ್ತಾರೆ.]

**ಕೌಶಲ** : ಮಾತನಾಡುವುದು.

**ಸಾಮರ್ಥ್ಯ** : ನಾಟಕ ಮತ್ತು ಚರ್ಚಾಸ್ಪರ್ಧೆಗಳಲ್ಲಿ ಭಾಗವಹಿಸುವುದು.

## ಕೃತಿಕಾರರ ಪರಿಚಯ



**ಬಿ. ವಿ. ಕಾರಂತ : ಬಾಬುಕೋಡಿ ವೆಂಕಟರಮಣ ಕಾರಂತ** ಅವರು ಸಾ.ಶ.೧೯೨೮ ರಲ್ಲಿ **ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ಮಂಚಿ ಗ್ರಾಮ**ದಲ್ಲಿ ಜನಿಸಿದರು. ತಂದೆ ಬಾಬುಕೋಡಿ ನಾರಾಯಣಪ್ಪಯ್ಯ, ತಾಯಿ ಲಕ್ಷ್ಮಮ್ಮ. ಬಾಲ್ಯದಲ್ಲಿ ನಾಟಕದ ಬಗೆಗೆ ಬಹಳ ಆಸಕ್ತಿಯುಂಟಾಗಿ ಗುಬ್ಬಿ ನಾಟಕ ಕಂಪನಿಗೆ ಸೇರಿದರು. ರಾಷ್ಟ್ರೀಯ ನಾಟಕ ಶಾಲೆಯ ನಿರ್ದೇಶಕರಾಗಿ ಸೇವೆಯನ್ನು ಸಲ್ಲಿಸಿದ್ದಾರೆ. ಇವರು **ಈಡಿಪಸ್, ಪಂಜರಶಾಲೆ, ಗೋಕುಲ ನಿರ್ಗಮನ, ಸತ್ತವರ ನೆರಳು, ಜೋಕುಮಾರಸ್ವಾಮಿ** ಮೊದಲಾದ ನಾಟಕಗಳನ್ನು ನಿರ್ದೇಶಿಸಿದ್ದಾರೆ. ಇವರಿಗೆ **ಪದ್ಮಶ್ರೀ ಪ್ರಶಸ್ತಿ. ಕಾಳಿದಾಸ ಸಮ್ಮಾನ್, ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ, ಗುಬ್ಬಿ ವೀರಣ್ಣ ಪ್ರಶಸ್ತಿ** ಮೊದಲಾದ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗಿದೆ. **ರವೀಂದ್ರನಾಥ ಟಾಗೋರ್** ಅವರ ಈ **ಬಂಗಾಳಿ** ನಾಟಕವನ್ನು **'ಪಂಜರಶಾಲೆ'** ಎಂದು ಕನ್ನಡಕ್ಕೆ ಅನುವಾದಿಸಿದ್ದಾರೆ.

© KTBS
NOT TO BE REPUBLISHED

## ಪದಗಳ ಅರ್ಥ

ಖಗ – ಪಕ್ಷಿ
ತರ್ಕ – ಆರು ದರ್ಶನಗಳಲ್ಲಿ ಒಂದು
ಪುರಾಣ – ಹಿಂದಿನ ಕಾಲದಲ್ಲಿ ನಡೆದುಹೋದ ಕಥೆ
ಪ್ರಜ್ಞಾವಧಾನಿ – ತಿಳಿವಳಿಕೆ ಹಾಗೂ ಸ್ಮರಣೆ ಶಕ್ತಿಯುಳ್ಳವನು
ಮಧುಫಲ – ಸಿಹಿಯಾದ ಹಣ್ಣು
ಮೃಗ – ಪ್ರಾಣಿ

| | | |
|---|---|---|
| ರಕ್ಷಕರು | – | ಕಾಪಾಡುವವರು |
| ವಿದ್ಯಾವತಂಸ | – | ವಿದ್ಯಾವಂತ |
| ವಂದಿಮಾಗಧರು | – | ಸ್ತುತಿ ಪಾಠಕರು, ಹೊಗಳುಭಟ್ಟರು. |
| ಶುಕ | – | ಗಿಳಿ |

## ಅಭ್ಯಾಸ

### ಅ. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

೧. ಗಿಳಿಮರಿಯು ಏನನ್ನು ತಿನ್ನಲು ತನ್ನ ಬಳಗವನ್ನು ಕರೆಯಿತು?

೨. ಮಂತ್ರಿಯ ಪ್ರಕಾರ ಗಿಳಿಮರಿಗೆ ಏನೇನು ಬರುವುದಿಲ್ಲ ಎಂದು ಹೇಳಿದನು?

೩. ರಾಜನು ಗಿಳಿಮರಿಯನ್ನು ಯಾವ ಶಾಲೆಗೆ ಸೇರಿಸಲು ಆದೇಶ ಮಾಡಿದನು?

೪. ರಾಜನು ಯಾರನ್ನು ಶುಕಶಿಕ್ಷಣ ಮಂತ್ರಿಯನ್ನಾಗಿ ನೇಮಿಸಿದನು?

೫. ರಾಜನು ಗಿಳಿಮರಿಗೆ ಏನನ್ನು ಕಲಿಸಬೇಕು ಎಂದು ಹೇಳಿದನು?

### ಆ. ಕೆಳಗಿನ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ.

@KTBS NOT TO BE REPUBLISHED

೧. ಗಿಳಿಮರಿಯ ಬಗೆಗೆ ಮಂತ್ರಿಯು ರಾಜನಿಗೆ ಏನು ಹೇಳಿದನು?

೨. ರಾಜನು ಗಿಳಿಮರಿಗೆ ಏನು ಮಾಡುವಂತೆ ಮಂತ್ರಿಗೆ ಹೇಳಿದನು?

೩. ಗಿಳಿಮರಿಯು ಏನೇನು ಕಲಿಯಬೇಕು ಎಂದು ರಾಜನು ಹೇಳುತ್ತಾನೆ?

೪. ರಾಜನ ಅಳಿಯನು ಏನೆಂದು ನಿವೇದನೆ ಮಾಡಿದನು?

೫. ಮಂತ್ರಿಯು ರಾಜನ ಅಳಿಯನ ಬಗೆಗೆ ಹೇಳಿದ ಮಾತುಗಳಾವುವು?

### ಇ. ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತಪದಗಳಿಂದ ತುಂಬಿರಿ.

೧. ಬನ್ನಿ ಬನ್ನಿ, ____________ ತಿನ್ನಿ, ಬೇಗ, ಹಾರಿಬನ್ನಿ.

೨. ಈ ಅಸಭ್ಯ ____________ ಯನ್ನು ರಾಜಶಾಲೆಗೆ ಸೇರಿಸತಕ್ಕದ್ದು.

೩. ತಾನು ಸುಸಂಸ್ಕೃತವಾಗಿ ಕಾಡಿನ ಉಳಿದ ____________ ಗಳನ್ನು ಸಭ್ಯಮಾಡಲಿ.

೪. ಅಳಿಯ ರಾಜ, ಇಂದಿನಿಂದ ನೀನು ____________ ದ ಮಂತ್ರಿ.

೫. ಒಂದು ಪಕ್ಷಿಯ ____________ ದಲ್ಲೂ ರಾಜನ ಆಸಕ್ತಿ ಎಷ್ಟಿದೆ ಎನ್ನುವುದು.

## ವ್ಯಾಕರಣ ಮಾಹಿತಿ

### ಅ. ಪ್ರತ್ಯಯಗಳ ಪರಿಚಯ

ಪ್ರತ್ಯಯಗಳು ನಾಮಪ್ರಕೃತಿಗೆ (ಮೂಲ ಪದಕ್ಕೆ) ನಿರ್ದಿಷ್ಟ ಅರ್ಥ ಬರುವಂತೆ ಮಾಡುತ್ತವೆ. ಪ್ರತ್ಯಯಗಳನ್ನು ಸ್ವತಂತ್ರವಾಗಿ ಬಳಸಲು ಬರುವುದಿಲ್ಲ. ಹಾಗೆ ಬಳಸಿದರೆ ಅರ್ಥವೂ ಬರುವುದಿಲ್ಲ. ವಾಕ್ಯ ರಚನೆಯ ಸಂದರ್ಭದಲ್ಲಿ ನಾಮಪ್ರಕೃತಿಗಳು ಪಡೆಯಬೇಕಾದ ಅರ್ಥ ವಿಶೇಷಗಳನ್ನು ತಂದುಕೊಡಲು ಸಹಾಯ ಮಾಡುವ ಕಾರಕಗಳೇ ಪ್ರತ್ಯಯಗಳು. ಇವುಗಳನ್ನು ವಿಭಕ್ತಿ ಪ್ರತ್ಯಯವೆಂದೂ ಕರೆಯುತ್ತಾರೆ.

'ಮನೆ' ಎಂಬುದು ನಾಮಪದದ ಮೂಲರೂಪ. ಇದನ್ನು ನಾಮಪ್ರಕೃತಿ ಎನ್ನುವರು. ಈ ನಾಮಪ್ರಕೃತಿಗೆ ಪ್ರತ್ಯಯಗಳು ಸೇರಿದಾಗ 'ಪದ' ಆಗುತ್ತದೆ.

**ಉದಾ** : ಮನೆ + ಉ = ಮನೆಯು,    ಮನೆ + ಅಲ್ಲಿ = ಮನೆಯಲ್ಲಿ

### ಆ. ವಿಭಕ್ತಿ ಪ್ರತ್ಯಯ

| | ವಿಭಕ್ತಿ | | ವಿಭಕ್ತಿ ಪ್ರತ್ಯಯ |
|---|---|---|---|
| ೧. | ಪ್ರಥಮ | – | ಉ |
| ೨. | ದ್ವಿತೀಯ | – | ಅನ್ನು |
| ೩. | ತೃತೀಯ | – | ಇಂದ |
| ೪. | ಚತುರ್ಥಿ | – | ಗೆ, ಇಗೆ, ಕ್ಕೆ |
| ೫. | ಪಂಚಮಿ | – | ದೆಸೆಯಿಂದ |
| ೬. | ಷಷ್ಠಿ | – | ಅ |
| ೭. | ಸಪ್ತಮಿ | – | ಅಲ್ಲಿ |

**ನಾಮಪ್ರಕೃತಿಗಳಿಗೆ ವಿಭಕ್ತಿ ಪ್ರತ್ಯಯಗಳನ್ನು ಸೇರಿಸಿದಾಗ ಏನಾಗುವುದು ಎಂಬುದನ್ನು ಗಮನಿಸೋಣ.**

| ನಾಮಪ್ರಕೃತಿ | ವಿಭಕ್ತಿ ಪ್ರತ್ಯಯ | ಪದ |
|---|---|---|
| ರಾಜ | ಉ | ರಾಜನು |
| ರಾಜ | ಅನ್ನು | ರಾಜನನ್ನು |
| ರಾಜ | ಇಂದ | ರಾಜನಿಂದ |
| ರಾಜ | ಗೆ, ಇಗೆ, ಕ್ಕೆ | ರಾಜನಿಗೆ |
| ರಾಜ | ದೆಸೆಯಿಂದ | ರಾಜನ ದೆಸೆಯಿಂದ |
| ರಾಜ | ಅ | ರಾಜನ |
| ರಾಜ | ಅಲ್ಲಿ | ರಾಜನಲ್ಲಿ |

©KTBS NOT TO BE REPUBLISHED

## ಭಾಷಾಭ್ಯಾಸ

### ಅ. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

೧. ಪ್ರತ್ಯಯಗಳು ಎಂದರೇನು?

೨. ಇಂದ, ನಾನು, ಅಲ್ಲಿ, ಬೇಗ, ಗೆ – ಇವುಗಳಲ್ಲಿ ಪ್ರತ್ಯಯಗಳನ್ನು ಆರಿಸಿ ಬರೆಯಿರಿ.

೩. ಮನೆ, ಕಲ್ಲನ್ನು, ನೆಲ, ಹೊಲ, ಶಾಲೆಯಲ್ಲಿ – ಇವುಗಳಲ್ಲಿ ನಾಮ ಪ್ರಕೃತಿಗಳನ್ನು ಆರಿಸಿ ಬರೆಯಿರಿ.

೪. ಉ, ಅನ್ನು, ಇಂದ, ಅಲ್ಲಿ– ಈ ಪ್ರತ್ಯಯಗಳನ್ನು ಕೆಳಗಿನ ನಾಮಪ್ರಕೃತಿಗಳಿಗೆ ಮಾದರಿಯಂತೆ ಹಚ್ಚಿರಿ.

ಮಾದರಿ: ಮನೆ
೧. ಮನೆ+ಉ=ಮನೆಯು
೨. ಮನೆ+ಅನ್ನು=ಮನೆಯನ್ನು
೩. ಮನೆ+ಇಂದ=ಮನೆಯಿಂದ
೪. ಮನೆ+ಅಲ್ಲಿ=ಮನೆಯಲ್ಲಿ

ನಾಮಪ್ರಕೃತಿಗಳು – ಶಾಲೆ, ಹೂವು, ಪುಸ್ತಕ, ಬಳೆ, ಹುಡುಗ, ರೈತ.

### ಆ. ಯೋಜನೆ

೧. ಪಂಜರ ಶಾಲೆ ನಾಟಕವನ್ನು ಕಥಾರೂಪದಲ್ಲಿ ಬರೆಯಿರಿ.

### ಇ. ಓದಿಗೆ ಮನ್ನಣೆ

೧. 'ಪಂಜರ ಶಾಲೆ' ಪಾಠವನ್ನು ಧ್ವನಿಯ ಏರಿಳಿತದೊಂದಿಗೆ ಓದಿರಿ.
೨. ಪಂಚತಂತ್ರದ ಕಥೆಗಳನ್ನು ಓದಿರಿ.

### ಈ. ಶುಭನುಡಿ

೧. ಕಲಿಯಲು ಸ್ವತಂತ್ರ ಇರಬೇಕು. ಒತ್ತಡ ಇರಬಾರದು.
೨. ಆಡಿ ಕಲಿ, ಹಾಡಿ ಕಲಿ, ನೋಡಿ ಕಲಿ, ಮಾಡಿ ಕಲಿ.

★★★★★

@KTBS NOT TO BE REPUBLISHED

# ೬. ಮಲ್ಲಜ್ಜಿಯ ಮಳಿಗೆ

J5I1I9

– ಸಮಿತಿ ರಚನೆ

**ಪ್ರವೇಶ :** ಸಮಾಜದಲ್ಲಿ ಕೆಲವರ ಜೀವನ ಆದರ್ಶಪ್ರಾಯ. ಅಂತಹವರು ಇತರರ ಸಹಾಯಕ್ಕಾಗಿಯೇ ತಾವು ಇರುವುದು ಎಂಬಂತೆ ಜೀವನ ಸಾಗಿಸುತ್ತಾರೆ. ಅವರು ಸಾಮಾನ್ಯ ಜನರ ನಡುವೆ ಸಾಮಾನ್ಯರಂತೆ ಬಾಳುತ್ತಾರೆ. ಆದರೆ ದಾರ್ಶನಿಕ ಗುಣಗಳನ್ನು ಮೈಗೂಡಿಸಿಕೊಂಡಿರುತ್ತಾರೆ. ಅಂಥ ವ್ಯಕ್ತಿಗಳನ್ನು ಗುರುತಿಸಿ, ಮೆಚ್ಚಿ, ಪ್ರಶಂಸಿಸಬೇಕೆಂಬುದು ಇಲ್ಲಿನ ಆಶಯವಾಗಿದೆ.



NOT TO BE REPUBLISHED

ಕನಕನಹಳ್ಳಿ,
ದಿ. ೧೪–೧೧–೨೦೨೪

ಪ್ರೀತಿಯ ಸಹೋದರಿ ಸೌಜನ್ಯಳಿಗೆ,

ನಿನ್ನ ಅಣ್ಣನು ಮಾಡುವ ಆಶೀರ್ವಾದಗಳು. ನಾವು ಮನೆಯಲ್ಲಿ ಎಲ್ಲರೂ ಕ್ಷೇಮವಾಗಿದ್ದೇವೆ. ನೀನು, ಚಿಕ್ಕಮ್ಮ, ಚಿಕ್ಕಪ್ಪ ಎಲ್ಲರೂ ಕ್ಷೇಮವಾಗಿರುವಿರಿ ಎಂದು ಆಶಿಸುತ್ತೇನೆ. ನಿನ್ನ ಪತ್ರ ತಲುಪಿತು. ನೀನು ಬರೆದ ಮಾಲ್‌ಗಳ ವಿಷಯ ವಿಶೇಷವಾಗಿತ್ತು. ನನ್ನೂರಿನಲ್ಲೂ ಒಂದು ಮಳಿಗೆ ಇದೆ. ಅದು ನೀನು ತಿಳಿಸಿದ ಮಾಲ್‌ಗಿಂತ ವಿಶೇಷವಾಗಿದೆ. ಅದುವೆ 'ಮಲ್ಲಜ್ಜಿಯ ಮಳಿಗೆ'. ಏನು ಅದರ ವಿಶೇಷ ಅಂತಿಯಾ? ಮುಂದೆ ಓದು, ಗೊತ್ತಾಗುತ್ತದೆ.


ಮಿಠಾಯಿ ಎಂದರೆ ಎಲ್ಲರಿಗೂ ಇಷ್ಟ. ಅದರಲ್ಲೂ ಮಕ್ಕಳಿಗಂತೂ ಬಲು ಇಷ್ಟ. ಹಾಗೆಯೇ ಮಲ್ಲಜ್ಜಿ. ಆಕೆ ನಮ್ಮೂರಿನ ಎಲ್ಲರಿಗೂ ಗೊತ್ತು. ಸುತ್ತ ಮುತ್ತಲಿನ ಊರಿನವರಿಗೂ ಚಿರಪರಿಚಿತಳು. ಮಲ್ಲಜ್ಜಿಯಿಂದ ಮಿಠಾಯಿ ಪ್ರಸಿದ್ಧವೋ, ಮಿಠಾಯಿಯಿಂದ ಮಲ್ಲಜ್ಜಿ ಪ್ರಸಿದ್ಧವೋ ಗೊತ್ತಿಲ್ಲ. ಮಲ್ಲಜ್ಜಿ ಮತ್ತು ಮಿಠಾಯಿ ಎರಡೂ ಇರುವ 'ಮಳಿಗೆ' ಎಲ್ಲರಿಗೂ ಒಂದು ರೀತಿಯ 'ತಂಗುದಾಣ'ವೇ ಸರಿ.

ಮಲ್ಲಜ್ಜಿಯ ಮಳಿಗೆ ನೋಡಲು ಚಿಕ್ಕದಾದರೂ ಅಲ್ಲಿ ಎಲ್ಲವೂ ದೊರಕುತ್ತವೆ. ಕಡಲೆ, ಪುರಿ, ಕೊಬ್ಬರಿ ಮಿಠಾಯಿಗಳಿಂದ ಹಿಡಿದು ಇತ್ತೀಚಿನ ತಿನಿಸುಗಳೂ ಸಿಗುತ್ತವೆ. ಯಲ್ಲಜ್ಜಿಗೆ ಬೇಕಾದ ಎಲೆ–ಅಡಿಕೆ, ಸಿಂಗಾರಪ್ಪನಿಗೆ ಸಕ್ಕರೆ–ಚಹಾಪುಡಿ, ಪೂಜಾರಪ್ಪನಿಗೆ ಊದುಕಡ್ಡಿ–ಕರ್ಪೂರ, ಬೀಗರಿಗೆ ಬಿಸ್ಕೀಟು–ಖಾರ, ಹೆಣ್ಣುಮಕ್ಕಳಿಗೆ ಸ್ನೋ–ಪೌಡರ್, ಚಿಕ್ಕಮಕ್ಕಳಿಗೆ ಚಾಕಲೇಟು–ಪೆಪ್ಪರಮೆಂಟು ಹೀಗೆ ಎಲ್ಲರಿಗೂ ಬೇಕಾಗುವ ವಸ್ತುಗಳು ಇಲ್ಲಿ ಲಭ್ಯ. ಆದ್ದರಿಂದ ಜನರು ಪ್ರತಿದಿನ ಒಂದಿಲ್ಲೊಂದು ಬಾರಿ ಈ ತಂಗುದಾಣವನ್ನು ದರ್ಶನ ಮಾಡುತ್ತಾರೆ.

ಮಕ್ಕಳ ಕೈಗೆ ದುಡ್ಡು ಸಿಕ್ಕಿದರೆ ಸಾಕು. ಮಲ್ಲಜ್ಜಿಯ ಅಂಗಡಿಗೆ ಓಟ. ಅಳುತ್ತ ಬಂದ ಪುಟಾಣಿ ಮಕ್ಕಳೂ ಅಲ್ಲಿ ಸುಮ್ಮನಾಗಿಬಿಡುತ್ತಾರೆ. ದುಡ್ಡಿಲ್ಲದೆ ಬಂದ ಪುಟ್ಟ ಮಕ್ಕಳಿಗೂ ಮಲ್ಲಜ್ಜಿ ನಗುತ್ತ ಪ್ರೀತಿಯಿಂದ ಮಿಠಾಯಿ ಕೊಡುತ್ತಾಳೆ. ನಾನು ಪುಟಾಣಿಯಾಗಿದ್ದಾಗ ಹೀಗೆಯೇ ಮಿಠಾಯಿ ಪಡೆದಿದ್ದೆನಂತೆ! 'ಈಗ ದುಡ್ಡಿಲ್ಲಜ್ಜಿ' ಎಂದು ದೊಡ್ಡವರೂ ವಸ್ತುಗಳನ್ನು ತೆಗೆದುಕೊಂಡು ಹೋಗುತ್ತಾರೆ. ಹಣವಿದ್ದಾಗ ತಪ್ಪದೇ ತಂದುಕೊಡುತ್ತಾರೆ. ತುರ್ತಾಗಿ ಬೇಕಾದಾಗ ಸಾಲವಾಗಿ ಹಣವನ್ನೂ ಪಡೆದುಕೊಂಡು ಹೋಗುತ್ತಾರೆ. ಹೀಗಾಗಿ ಮಲ್ಲಜ್ಜಿಯ ಮಳಿಗೆ ಒಂದು ಪ್ರೀತಿಯ 'ಸಹಕಾರಿ ಬ್ಯಾಂಕ್' ಇದ್ದಂತೆ!

ನನ್ನೂರಿಗೆ ಯಾರು ಹೊಸಬರು ಬಂದರೂ ಮೊದಲು ಮಾತನಾಡಿಸುವುದು ಮಲ್ಲಜ್ಜಿಯನ್ನೇ. ಯಾರ ಮನೆ ಬೇಕು ತೋರಿಸುತ್ತಾಳೆ. ಯಾವ ವಿಷಯ ಬೇಕು–ತಿಳಿಸುತ್ತಾಳೆ. ಇಲ್ಲಿಯ ಎಲ್ಲ ಕುಟುಂಬಗಳು, ಜನರು, ಮಕ್ಕಳು ಮಲ್ಲಜ್ಜಿಗೆ ಗೊತ್ತು! ಮದುವೆಯಾಗುವ ಹುಡುಗ–ಹುಡುಗಿಯರ ಬಗ್ಗೆ ಕೇಳಿದರೆ ಸಾಕು, ಅವರ ಜಾತಕ ಸಮೇತ ವಿವರಿಸಿ ಬಿಡುತ್ತಾಳೆ. ಯಾರಾದರೂ ಯಾರಿಗಾದರೂ ಯಾವ ವಿಷಯವನ್ನಾದರೂ ತಿಳಿಸಲು ಹೇಳಿದ್ದರೆ, ಅವರಿಗೆ ಆ ವಿಷಯವನ್ನು ಯಥಾವತ್ತಾಗಿ ತಿಳಿಸಿಬಿಡುತ್ತಾಳೆ ಮಲ್ಲಜ್ಜಿ. ಪತ್ರಿಕೆ, ಪತ್ರಗಳನ್ನು ಸಂಬಂಧಿಸಿದವರಿಗೆ ತಪ್ಪದೇ ತಲುಪಿಸುತ್ತಾಳೆ. ಯಾರು ಎಲ್ಲಿಗೆ ಏಕೆ ಹೋಗಿದ್ದಾರೆ? ಯಾವಾಗ ಬರುತ್ತಾರೆ? ಎಲ್ಲವೂ ತಿಳಿದಿರುತ್ತದೆ ಮಲ್ಲಜ್ಜಿಗೆ! ಟೆಂಪೋ, ಜೀಪು, ಬಸ್ಸುಗಳು ಬಂದು ಹೋಗುವ ಸಮಯದ ವಿವರವೂ ಇಲ್ಲಿ ಲಭ್ಯ. ಹಾಗಾಗಿ ಮಲ್ಲಜ್ಜಿಯ ಮಳಿಗೆ ಒಂದು ಉಚಿತ 'ಸಂಪರ್ಕ ಕೇಂದ್ರ' ಇದ್ದಂತೆ.

© KTBS NOT TO BE REPUBLISHED



ಮಲ್ಲಜ್ಜಿ ಯಾರ ಮೇಲೂ ಸಿಟ್ಟು ಮಾಡಿಕೊಳ್ಳುವುದಿಲ್ಲ. ಎಲ್ಲರೊಂದಿಗೂ ನಗುನಗುತ್ತಾ ಮಾತನಾಡುತ್ತಾಳೆ. ಜನರ ಸಮಸ್ಯೆಗಳನ್ನೂ ಸುಲಭವಾಗಿ ಪರಿಹರಿಸಿಬಿಡುತ್ತಾಳೆ. ಮಕ್ಕಳಿಂದ ಹಿಡಿದು ಮುದುಕರವರೆಗಿನ ದೂರುಗಳನ್ನು ದೂರ ಮಾಡಿಬಿಡುತ್ತಾಳೆ. ಮಳಿಗೆಯ ಮುಂದಿರುವ ಚಪ್ಪಡಿಕಲ್ಲುಗಳೇ ಇಲ್ಲಿ ಕಟಕಟೆ. ಮಲ್ಲಜ್ಜಿಯ ಕೋರ್ಟಿನಲ್ಲಿ ಯಾವ ವಕೀಲರೂ ಸಾಕ್ಷಿಗಳೂ ಬೇಕಿಲ್ಲ. ಎಷ್ಟೋ ಬಾರಿ ದೂರು ನ್ಯಾಯಾಲಯದಲ್ಲಿಯೂ ಬಗೆಹರಿಯುವುದಿಲ್ಲ. ಕೋರ್ಟು ಶುಲ್ಕ, ವಕೀಲರ ಫೀಜು ಯಾವುದೂ ಇಲ್ಲಿಲ್ಲ. ಮಲ್ಲಜ್ಜಿ ನೀಡುವ ತೀರ್ಪು ಯಾವ ನ್ಯಾಯಾಧೀಶರ ತೀರ್ಪಿಗೂ ಕಡಿಮೆಯಿಲ್ಲ. ಆದ್ದರಿಂದ ಮಲ್ಲಜ್ಜಿಯ ಮಳಿಗೆ ಒಂದು ಜನಪ್ರಿಯ 'ಜನತಾ ನ್ಯಾಯಾಲಯ' ಇದ್ದಂತೆ.

ನನಗಂತೂ ಈ ಮಳಿಗೆ ಆಶ್ಚರ್ಯದಾಯಕವಾಗಿದೆ. ಇದರ ಬಾಗಿಲು ಸದಾ ತೆರೆದೇ ಇರುತ್ತದೆ. ಮಲ್ಲಜ್ಜಿ ಅಂಗಡಿಯಲ್ಲೇ ಇರುತ್ತಾಳೆ. ಯಾವ ಹೊಸ ಬಗೆಯ ಮಿಠಾಯಿ ಚಾಕಲೇಟ್ ಕೇಳಿದರೂ ಕೊಟ್ಟುಬಿಡುತ್ತಾಳೆ. ಯಾವಾಗ ವ್ಯಾಪಾರ ಮಾಡುತ್ತಾಳೋ ವಸ್ತುಗಳನ್ನು ಯಾವಾಗ ತರುತ್ತಾಳೋ ನನಗೆ ಬಲು ಸೋಜಿಗವಾಗಿದೆ. ಹೀಗಾಗಿ ಮಲ್ಲಜ್ಜಿಯ ಮಳಿಗೆ ನನಗೆ ಒಂದು 'ಜಾದೂ ಲೋಕವಿದ್ದಂತೆ.'

ಮಲ್ಲಜ್ಜಿಯ ಮಳಿಗೆ ಈಗ ಸ್ವಲ್ಪ ದೊಡ್ಡದಾಗಿದೆ. ಹೊಸ ಹೊಸದಾದ ಪುಸ್ತಕ, ಪೆನ್ನು ಇನ್ನೂ ತುಂಬಾ ವಸ್ತುಗಳು ಬಂದಿವೆ. ಮಲ್ಲಜ್ಜಿಯ ಮಳಿಗೆಯ ಬಗ್ಗೆ ಎಷ್ಟು ಹೇಳಿದರೂ ಸಾಲದೆನಿಸುತ್ತದೆ. ಈಗ ಇಷ್ಟಕ್ಕೆ ಸಾಕು ಮಾಡುತ್ತೇನೆ. ಮುಂದಿನ ಪತ್ರದಲ್ಲಿ ಮತ್ತಷ್ಟು ವಿವರ

@KTBS NOT TO BE REPUBLISHED

ಬರೆಯುತ್ತೇನೆ. ನನ್ನ ಊರಿಗೆ ಬಂದಾಗ ನಿನಗೆ ಈ ತಂಗುದಾಣದ ದರ್ಶನ ಮಾಡಿಸುತ್ತೇನೆ. ನಿನಗಿಷ್ಟವಾದ ಮಿಠಾಯಿಯನ್ನೂ ಕೊಡಿಸುತ್ತೇನೆ.

ಅಣ್ಣನು ಮಾಡುವ ಆಶೀರ್ವಾದಗಳು–

ನಿನ್ನ ಪ್ರೀತಿಯ ಸಹೋದರ,
ಸೃಜನ

ಇವರಿಗೆ

ಕುಮಾರಿ ಸೌಜನ್ಯ,
೫ನೆಯ ತರಗತಿ,
ಹಿರಿಯ ಪ್ರಾಥಮಿಕ ಶಾಲೆ,
ನಂ.೧೦, ವಿದ್ಯಾನಗರ,
ಉತ್ತರ ಕನ್ನಡ.

**ಕೌಶಲ** : ಬರೆಯುವುದು.
**ಸಾಮರ್ಥ್ಯ** : ಅನೌಪಚಾರಿಕ ಪತ್ರ ಮತ್ತು ಚಿಕ್ಕ ಪ್ರಬಂಧಗಳನ್ನು ಸ್ವತಂತ್ರವಾಗಿ ರಚಿಸುವುದು.

## ಪದಗಳ ಅರ್ಥ

| | | |
|---|---|---|
| ಆಶೀರ್ವಾದ | – | ಹಾರೈಕೆ. |
| ಕುಟುಂಬ | – | ಮನೆತನ, ಒಕ್ಕಲು. |
| ಕೋರ್ಟ್ | – | ನ್ಯಾಯಕ್ಕಾಗಿ ವಿಚಾರಣೆ ನಡೆಸುವ ಸ್ಥಳ, ನ್ಯಾಯಾಲಯ. |
| ಗೊತ್ತು | – | ಪರಿಚಯ, ತಿಳಿದಿರುವುದು. |
| ಚಪ್ಪಡಿಕಲ್ಲು | – | ಚಪ್ಪಡಿ, ಹಾಸುಗಲ್ಲು. |
| ಚಿರಪರಿಚಿತಳು | – | ದೀರ್ಘಕಾಲದ ಪರಿಚಯವುಳ್ಳವಳು, ಎಲ್ಲರಿಗೂ ಗೊತ್ತಿರುವಾಕೆ. |
| ಜನಪ್ರಿಯ | – | ಜನರ ಮೆಚ್ಚುಗೆಗೆ ಪಾತ್ರವಾದ. |
| ಜಾತಕ ಸಮೇತ | – | ಸವಿವರವಾದ ಮಾಹಿತಿಯಿಂದ ಕೂಡಿದ, ಜನ್ಮಕುಂಡಲಿ ವಿವರಗಳಿಂದ ಕೂಡಿದ. |
| ಜಾದೂ ಲೋಕ | – | ಇಂದ್ರಜಾಲ ನಡೆಯುವ ಸ್ಥಳ, ಮಾಯಾವಿದ್ಯೆಯ ಪ್ರಪಂಚ. |
| ತಂಗುದಾಣ | – | ತಾತ್ಕಾಲಿಕವಾಗಿ ಉಳಿದುಕೊಳ್ಳುವ ಜಾಗ. |
| ತಲುಪು | – | ಮುಟ್ಟು, ಸೇರು. |
| ತೀರ್ಪು | – | ನಿರ್ಣಯ, ತೀರ್ಮಾನ. |
| ತುರ್ತು | – | ಜರೂರು, ಕೂಡಲೆ. |
| ದರ್ಶನ | – | ಭೇಟಿ, ಕಾಣುವಿಕೆ. |
| ದುಡ್ಡು | – | ರೊಕ್ಕ, ಹಣ. |

@KTBS NOT TO BE REPUBLISHED

| | | |
|---|---|---|
| ಪತ್ರ | – | ಓಲೆ, ಕಾಗದ. |
| ಪಡೆ | – | ಗಳಿಸು, ದೊರಕಿಸು. |
| ಪತ್ರಿಕೆ | – | ನಿಯತಕಾಲಿಕೆ, ಬರೆದ ಕಾಗದ. |
| ಪ್ರಕರಣ | – | ಸಂಗತಿ, ಪ್ರಸಂಗ. |
| ಪ್ರಸಿದ್ಧ | – | ಹೆಸರಾದ, ಕೀರ್ತಿಪಡೆದ. |
| ಬಗೆಹರಿ | – | ನೆರವೇರು, ಕೈಗೂಡು. |
| ಮಾಲ್ | – | ಮಳಿಗೆ, ಅಂಗಡಿಗಳ ಸಂಕೀರ್ಣ |
| ಯಥಾವತ್ತಾಗಿ | – | ಸರಿಯಾಗಿ, ಇದ್ದಹಾಗೆ |
| ಶುಲ್ಕ | – | ಸುಂಕ, ದಂಡ. |
| ಸಮಸ್ಯೆ | – | ತೊಡಕು, ತೊಂದರೆ. |
| ಸಮೇತ | – | ಕೂಡಿದ, ಸಹಿತವಾದ. |
| ಸಂಪರ್ಕ ಕೇಂದ್ರ | – | ಸಂಪರ್ಕ ಕಲ್ಪಿಸುವ ಸ್ಥಳ, ಸೇರುವ ಮುಖ್ಯಸ್ಥಳ. |
| ಸಹಕಾರ | – | ಪರಸ್ಪರ ಸಹಾಯ, ಒಗ್ಗಟ್ಟಿನಿಂದ ಕೆಲಸ ಮಾಡುವಿಕೆ. |
| ಸಹೋದರಿ | – | ಅಕ್ಕ ಅಥವಾ ತಂಗಿ, ಒಡಹುಟ್ಟಿದವಳು. |
| ಸಾಕ್ಷಿ | – | ಕಣ್ಣಾರೆ ಕಂಡವ, ಪುರಾವೆ. |
| ಸೋಜಿಗ | – | ಆಶ್ಚರ್ಯ, ಕುತೂಹಲ. |
| ವಿಶೇಷ | – | ಹೆಚ್ಚಿನ ಗುಣ, ಹೆಚ್ಚುಗಾರಿಕೆ. |
| ಹಂಗಿಸು | – | ಕೆಣಕು, ಮೂದಲಿಸು. |
| ಹೊಸಬರು | – | ಅಪರಿಚಿತರು, ಗುರುತಿಲ್ಲದವರು. |

## ಅಭ್ಯಾಸ

NOT TO BE REPUBLISHED ©KTBS

### ಅ. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

೧. ಸೃಜನ ಯಾರಿಗೆ ಪತ್ರವನ್ನು ಬರೆದನು?
೨. ಯಾರಿಗೆ ಮಿಠಾಯಿ ಎಂದರೆ ಇಷ್ಟ?
೩. ಮಲ್ಲಜ್ಜಿ ಎಲ್ಲರೊಂದಿಗೆ ಹೇಗೆ ಮಾತನಾಡುತ್ತಾಳೆ?
೪. ಮಲ್ಲಜ್ಜಿಯ ಕೋರ್ಟಿನಲ್ಲಿ ವಕೀಲರ ಶುಲ್ಕ ಎಷ್ಟು?
೫. ಸೃಜನನಿಗೆ ಮಲ್ಲಜ್ಜಿಯ ಮಳಿಗೆ ಯಾವ ಲೋಕದಂತೆ ತೋರಿದೆ?

### ಆ. ಕೆಳಗಿನ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ.

೧. ಮಲ್ಲಜ್ಜಿಯ ಮಳಿಗೆಯಲ್ಲಿ ದೊರೆಯುವ ವಸ್ತುಗಳು ಯಾವುವು? ಪಟ್ಟಿಮಾಡಿರಿ.
೨. ಮಲ್ಲಜ್ಜಿಯ ನ್ಯಾಯಾಲಯದ ಕುರಿತು ವಿವರಿಸಿರಿ.
೩. ಸೃಜನನಿಗೆ ಮಲ್ಲಜ್ಜಿಯ ಮಳಿಗೆ ಜಾದೂಲೋಕವೆನಿಸಿದ್ದು ಏಕೆ?

## ಇ. ಬಿಟ್ಟ ಸ್ಥಳಗಳನ್ನು ಸರಿಯಾದ ಪದಗಳಿಂದ ತುಂಬಿರಿ.

೧. ಮಲ್ಲಜ್ಜಿ ನಗುತ್ತಾ ಪ್ರೀತಿಯಿಂದ ________________ಕೊಡುತ್ತಾಳೆ.

೨. ಅವರ ___________ ಸಮೇತ ವಿವರಿಸಿ ಬಿಡುತ್ತಾಳೆ.

೩. ಮಕ್ಕಳಿಂದ ಹಿಡಿದು ಮುದುಕರವರೆಗಿನ ________ ದೂರಮಾಡಿ ಬಿಡುತ್ತಾಳೆ.

೪. ಇದರ ಬಾಗಿಲು ಸದಾ ___________ ಇರುತ್ತದೆ.

೫. 'ಮಲ್ಲಜ್ಜಿಯ ಮಳಿಗೆ' ನನಗೆ ಒಂದು _____________ ಇದ್ದಂತೆ.

## ವ್ಯಾಕರಣ ಮಾಹಿತಿ

## ಅ. ಪತ್ರಲೇಖನ

ನಾವು ಸಾಮಾನ್ಯವಾಗಿ ಇನ್ನೊಬ್ಬರ ಜೊತೆ ಮಾತಿನ ಮೂಲಕ ವಿಷಯ, ಅಭಿಪ್ರಾಯಗಳನ್ನು ಹಂಚಿಕೊಳ್ಳುತ್ತೇವೆ. ಅವರು ನೇರವಾಗಿ ಸಂಪರ್ಕಕ್ಕೆ ಸಿಗದಿದ್ದಾಗ ಅಂತಹ ಸಂದರ್ಭಗಳಲ್ಲಿ ಬರೆವಣಿಗೆಯ ಮೂಲಕ ಅವರಿಗೆ ವಿಷಯವನ್ನು ತಿಳಿಸುತ್ತೇವೆ.

ಹೀಗೆ ಸಂಗತಿ, ವಿಚಾರ, ವಿಷಯಗಳನ್ನು ಇನ್ನೊಬ್ಬರ ಜೊತೆ ಬರೆವಣಿಗೆಯ ಮೂಲಕ ಹಂಚಿಕೊಳ್ಳುವುದು ಇಲ್ಲವೇ ತಿಳಿಸುವುದನ್ನು 'ಪತ್ರಲೇಖನ' ಎನ್ನುತ್ತೇವೆ. ಪತ್ರ ಎಂದರೆ ಕಾಗದ, ಓಲೆ, ಬರೆದ ಕಾಗದ ಎಂಬ ಅರ್ಥಗಳಿವೆ.

### ೧. ಪತ್ರದ ಕೆಲವು ವಿಧಗಳು

೧. ವೈಯಕ್ತಿಕ ಪತ್ರಗಳು.

೨. ಮನವಿ ಪತ್ರಗಳು

೩. ಆಡಳಿತ ವಿಷಯಗಳಿಗೆ ಸಂಬಂಧಿಸಿದ ಪತ್ರಗಳು.

೪. ಜಾಹೀರಾತು ಮತ್ತು ಪ್ರಕಟಣೆ ಪತ್ರಗಳು.

೫. ವಿವಿಧ ಸಂಗ್ರಹಣೆ ಹಾಗೂ ಪತ್ರಿಕಾವರದಿ ಪತ್ರಗಳು.

### ೨. ಪತ್ರ ಬರೆಯುವಾಗ ಅನುಸರಿಸಬೇಕಾದ ಸಾಮಾನ್ಯ ನಿಯಮಗಳು:

೧. ಪತ್ರದ ಮೇಲ್ಭಾಗದಲ್ಲಿ ದಿನಾಂಕ, ಹೆಸರು, ವಿಳಾಸವಿರಬೇಕು.

೨. ಸೂಕ್ತವಾದ ಸಂಬೋಧನೆ ಬರೆಯಬೇಕು.

೩. ವಿಷಯಗಳನ್ನು ಅರ್ಥವತ್ತಾಗಿ ಸರಳ ಶೈಲಿಯಲ್ಲಿ ಬರೆಯಬೇಕು.

೪. ಔಚಿತ್ಯಪೂರ್ಣವಾದ ಕೋರಿಕೆ, ಹಾರೈಕೆ ಇರಬೇಕು. ಉದಾ: ಇತಿ ನಮಸ್ಕಾರ, ಇತಿ ಆಶೀರ್ವಾದ.

೫. ಪತ್ರದ ಕೊನೆಯಲ್ಲಿ ಸಹಿ ಹಾಕಬೇಕು.

೬. ಲಕೋಟೆ ಮತ್ತು ಪತ್ರದ ಮೇಲ್ಭಾಗದಲ್ಲಿ ಕಳುಹಿಸುವವರ ವಿಳಾಸವನ್ನು ಚಿಕ್ಕದಾಗಿ ಬರೆಯಬೇಕು.

@KTBS NOT TO BE REPUBLISHED

೭. ಲಕೋಟೆಯ ಇನ್ನೊಂದು ಬದಿಯಲ್ಲಿ ಕಳುಹಿಸಬೇಕಾದ ವಿಳಾಸವನ್ನು ಚಿಕ್ಕದಾಗಿ ಬರೆಯಬೇಕು.

೮. ಬರೆವಣಿಗೆಯು ಅಂದವಾದ ಶೈಲಿಯಲ್ಲಿ, ಆಕರ್ಷಕವಾಗಿ ಇರಬೇಕು.

### ೩. ಸಂಬೋಧನೆಗಳು:

| | | |
|---|---|---|
| ತಂದೆಗೆ | – | ತೀರ್ಥರೂಪ |
| ತಾಯಿಗೆ | – | ಮಾತೃಶ್ರೀ |
| ಗುರುಗಳಿಗೆ | – | ಪೂಜ್ಯ |
| ಗೆಳೆಯ/ಗೆಳತಿಗೆ | – | ಆತ್ಮೀಯ, ನಲ್ಮೆಯ, ಪ್ರೀತಿಯ |
| ಚಿಕ್ಕಪ್ಪ ದೊಡ್ಡಪ್ಪನಿಗೆ | – | ತೀರ್ಥರೂಪ ಸಮಾನ |
| ಚಿಕ್ಕಮ್ಮ ದೊಡ್ಡಮ್ಮ | – | ಮಾತೃಶ್ರೀ ಸಮಾನ |
| ಕಿರಿಯರಿಗೆ | – | ಚಿರಂಜೀವಿ |

ಹೀಗೆ ವೈಯಕ್ತಿಕ ಪತ್ರಗಳನ್ನು ಬರೆಯುವಾಗ ಬೇರೆ ಬೇರೆ ವ್ಯಕ್ತಿಗಳಿಗೆ ಸಂಬಂಧಿಸಿದಂತೆ ಸೂಕ್ತವಾದ ಸಂಬೋಧನೆಗಳನ್ನು ಬಳಸುತ್ತೇವೆ. ಇದು ನಾವು ಅವರಿಗೆ ತೋರಿಸುವ ಗೌರವವನ್ನು ಸೂಚಿಸುತ್ತದೆ.

## ಭಾಷಾಭ್ಯಾಸ

### ಅ. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

೧. ಸಮಾನಾರ್ಥಕ ಪದಗಳನ್ನು ಬರೆಯಿರಿ.

ಪತ್ರ, ಉಚಿತ, ತುರ್ತು, ಶುಲ್ಕ, ತೀರ್ಪು.

೨. ಯಾವುದಾದರೂ ನಾಲ್ಕು ವಿಧದ ಪತ್ರಗಳನ್ನು ಹೆಸರಿಸಿರಿ.

### ಆ. ಓದಿಗೆ ಮನ್ನಣೆ

೧. ಸಮಾಜ ಸುಧಾರಕರ ಸಾಧನೆಗಳ ಕುರಿತು ಓದಿರಿ.

೨. ನಿಮ್ಮ ಊರಿನ ಸಮಾಜ ಸೇವಕರ ಕಾರ್ಯಗಳ ಬಗ್ಗೆ ತಿಳಿಯಿರಿ.

೩. ವಿವಿಧ ಪುಸ್ತಕ ಮಳಿಗೆಗಳ ಪರಿಚಯ ಮಾಡಿಕೊಳ್ಳಿರಿ.

೪. ಮಾಲ್‌ಗಳಲ್ಲಿ ದೊರಕುವ ವಸ್ತುಗಳ ಬಗ್ಗೆ ಅರಿತುಕೊಳ್ಳಿರಿ.

### ಇ. ಶುಭನುಡಿ

೧. ಜನಸೇವೆಯಿಂದ ಜನಮನ್ನಣೆ ದೊರಕುತ್ತದೆ.

೨. ವೃತ್ತಿಯೊಂದಿಗೆ ಸೇವೆಯೂ ಉತ್ತಮವಾದ ಪ್ರವೃತ್ತಿ.

೩. ಎಲ್ಲರೊಳಗೊಂದಾಗುವ ಬಾಳು ಆದರ್ಶದ ಬಾಳು.

೪. ಅನುಭವದ ನುಡಿಗಳು ಬದುಕಿಗೆ ದಾರಿದೀಪ.

★★★★★

@KTBS NOT TO BE REPUBLISHED

# ೭. ಧೀರ ಸೇನಾನಿ

– ಬಸವರಾಜ ಹದ್ಲಿ

**ಪ್ರವೇಶ :** ನಮ್ಮ ದೇಶ ತ್ಯಾಗ, ಬಲಿದಾನಗಳಿಗೆ ಹೆಸರುವಾಸಿಯಾಗಿದೆ. ಇಲ್ಲಿ ಪುರಾಣ ಕಾಲದಲ್ಲಿ ಮೊದಲ್ಗೊಂಡು ಕಾರ್ಗಿಲ್ ಹೋರಾಟದವರೆಗೂ ಅನೇಕಾನೇಕ ಯುದ್ಧಗಳು ನಿರಂತರವಾಗಿ ನಡೆದಿವೆ. ಜಾಗತಿಕ ಮಹಾಯುದ್ಧಗಳಲ್ಲೂ ಭಾರತೀಯರು ಸಾಹಸವನ್ನು ಮೆರೆದಿದ್ದಾರೆ. ದೇಶದ ರಕ್ಷಣೆಯ ಮಾತು ಬಂದಾಗ ಜೀವದ ಹಂಗು ತೊರೆದು ಹೋರಾಡಿದ ಅದೆಷ್ಟೋ ಮಹನೀಯರು ನಮ್ಮ ಕಣ್ಣಮುಂದೆ ಹಾದು ಹೋಗುತ್ತಾರೆ. ಅಂತಹವರು ನಮ್ಮ ಪಾಲಿಗೆ ಪ್ರಾತಃಸ್ಮರಣೀಯರು.



ಭಾರತದಲ್ಲಿ ಅನೇಕ ಜನ ಮೇಧಾವಿಗಳು, ವೀರಯೋಧರು, ವಿಜ್ಞಾನಿಗಳು, ಸಾಧಕರು ಜನ್ಮ ತಾಳಿದ್ದಾರೆ. ಅಂತಹ ಸಾಧಕರ ಸಾಲಿನಲ್ಲಿ ಧೀರ ಸೇನಾನಿ ಮಹಾದಂಡನಾಯಕ ಜನರಲ್ ಜಿ.ಜಿ.ಬೇವೂರರು ಒಬ್ಬರು.

ಕರ್ನಾಟಕದ ಬಾಗಲಕೋಟೆ ಜಿಲ್ಲೆಯ ಬೇವೂರ ಗ್ರಾಮದವರಾದ ಸರ್. ಗುರುನಾಥ ರಾವ್ ಹಾಗೂ ರುಕ್ಮಿಣಿಬಾಯಿಯವರ ಪುತ್ರನೇ ಗೋಪಾಲರಾವ್. ಇವರು ದಿನಾಂಕ ೧೧-೦೮-೧೯೧೬ ರಂದು ಜನಿಸಿದರು. ತಂದೆಯ ಮಾರ್ಗದರ್ಶನ ತಾಯಿಯ ದೇಶಾಭಿಮಾನಿ ಭಾವನೆಗಳೊಂದಿಗೆ ಗೋಪಾಲರಾಯರು ಬೆಳೆದರು. ರಾಯಲ್ ಇಂಡಿಯನ್ ಮಿಲಿಟರಿ ಕಾಲೇಜಿನಲ್ಲಿ ಮತ್ತು ಇಂಡಿಯನ್ ಮಿಲಿಟರಿ ಅಕಾಡೆಮಿಯಲ್ಲಿ ಸೈನಿಕ ಶಿಕ್ಷಣ ಪಡೆದರು. ಶಿಸ್ತು, ಶಿಕ್ಷಣ, ಕಠಿಣ ಶ್ರಮಗಳಿಂದ ತಮ್ಮ ವಿದ್ಯಾರ್ಥಿ ಜೀವನದಲ್ಲಿಯೇ 'ಗೌರವಖಡ್ಗ' ಮತ್ತು ಚಿನ್ನದ ಪದಕಗಳನ್ನು ಪಡೆದುಕೊಂಡ ಕೀರ್ತಿ ಅವರದು. ೧೯೩೭ರಲ್ಲಿ ಬೇವೂರರು ಭಾರತೀಯ ಸೇನಾಪಡೆ ಸೇರಿದರು.

ಜನರಲ್ ಜಿ.ಜಿ.ಬೇವೂರರೊಳಗಿನ ನಿಜವಾದ ಯೋಧನನ್ನು ದೇಶ ಗುರುತಿಸಿದ್ದು ಬಾಂಗ್ಲಾ ಯುದ್ಧದಲ್ಲಿ. ೧೯೭೧ರಲ್ಲಿ ಬಾಂಗ್ಲಾದೇಶ ಹಾಗೂ ಪಾಕಿಸ್ತಾನಗಳ ನಡುವೆ ಯುದ್ಧ ನಡೆಯಿತು. ಆ ಯುದ್ಧದಲ್ಲಿ ಪಾಕ್ ಸೈನಿಕರು ಮಾನವ ಹಕ್ಕುಗಳನ್ನು ಉಲ್ಲಂಘಿಸಿದರು. ಬಾಂಗ್ಲಾ ಸ್ವಾತಂತ್ರ್ಯ ಹೋರಾಟದಲ್ಲಿ ಬಾಂಗ್ಲಾದೇಶಕ್ಕೆ ಭಾರತದ ಸೇನೆ ಸಹಕರಿಸಿತು. ಆಗ ಬೇವೂರರು

©KTBS NOT TO BE REPUBLISHED



ಪಶ್ಚಿಮ ಪಾಕಿಸ್ತಾನದ ಕಡೆಗೆ ನುಗ್ಗಿದರು. ಸೇನಾ ತುಕಡಿಯ ಮುಖ್ಯಸ್ಥರಾಗಿ ರಾಜಸ್ಥಾನ ಮತ್ತು ಕಚ್ಛ್‌ದ ದುರ್ಗಮ ಪ್ರದೇಶಗಳಲ್ಲಿ ಸಾವಿರಾರು ಚದರಮೈಲು ಪಾಕ್ ನೆಲವನ್ನು ಆಕ್ರಮಿಸಿಕೊಂಡರು. ಈ ಸಂದರ್ಭದಲ್ಲಿ ಸೇನಾ ಮಹಾದಂಡನಾಯಕರಾಗಿದ್ದ ಫೀಲ್ಡ್ ಮಾರ್ಷಲ್ ಮಾಣಿಕ್ ಷಾ ಅವರು ಬೇವೂರರನ್ನು ಅಭಿಮಾನದಿಂದ ಬಿಗಿದಪ್ಪಿ ಪ್ರಶಂಸಿಸಿದರು. ಬೇವೂರರ ಸಾಹಸ ದೇಶದಲ್ಲಿ ಮನೆಮಾತಾಯಿತು. ಅವರು ತೋರಿದ ಶೌರ್ಯ ಸಾಹಸಕ್ಕೆ ರಾಷ್ಟ್ರಮಟ್ಟದ ಗೌರವವು ದೊರೆಯಿತು.

ಕಾಲೇಜು ವಿದ್ಯಾರ್ಥಿಗಳಿಗೆ ಎನ್.ಸಿ.ಸಿ.ಯು ಕಲಿಕೆಯ ಅಂಗವಾದಾಗ ಬೇವೂರರು ಅದರ ಪ್ರಥಮ ನಿರ್ದೇಶಕರಾದರು. “ಯುವಜನರು ನಾಳೆಯ ದೇಶ ರಕ್ಷಕರಾಗಬೇಕು” ಎಂಬುದು ಅವರ ಬಯಕೆಯಾಗಿತ್ತು. ಅದಕ್ಕಾಗಿ ಅವರು ಹಗಲಿರುಳೆನ್ನದೆ ಶ್ರಮಿಸಿದರು. ೧೯೭೩ ಜನವರಿ ೧೫ರಂದು ಗೋಪಾಲರಾವ್ ಗುರುನಾಥರಾವ್ ಬೇವೂರರು ಭಾರತದ ಭೂಸೇನೆಯ ಒಂಬತ್ತನೆಯ ಮಹಾದಂಡನಾಯಕರಾದರು.

ಜನರಲ್ ಜಿ.ಜಿ.ಬೇವೂರರ ಕರ್ತವ್ಯನಿಷ್ಠೆ, ದಕ್ಷ ಆಡಳಿತ ಕಂಡು ಭಾರತ ಸರ್ಕಾರವು ಅವರಿಗೆ ‘ಪದ್ಮಭೂಷಣ ಪ್ರಶಸ್ತಿ’ ಹಾಗೂ ಪರಮ ವಿಶಿಷ್ಟ ಸೇವಾಪದಕವನ್ನು ಕೊಟ್ಟು ಗೌರವಿಸಿತು. ಮುಂದೆ ಡಾರ್ಜಿಲಿಂಗ್‌ನಲ್ಲಿ ಕಟ್ಟಿಸಿದ ಯುದ್ಧ ಸ್ಮಾರಕ ಭವನಕ್ಕೆ ಜನರಲ್ ಜಿ.ಜಿ.ಬೇವೂರರ ಹೆಸರಿಡಲಾಯಿತು.

ಒಮ್ಮೆ ಬೇವೂರಿನ ಆದರ್ಶ ವಿದ್ಯಾವರ್ಧಕ ಸಂಘಕ್ಕೆ ಜನರಲ್ ಜಿ.ಜಿ.ಬೇವೂರರು ಅತಿಥಿಗಳಾಗಿ ಆಗಮಿಸಿದ್ದರು. ಜಿಲ್ಲಾಧಿಕಾರಿಯವರು ಅವರ ರಕ್ಷಣೆಯ ಜವಾಬ್ದಾರಿಯನ್ನು ಅತ್ಯುತ್ತಮ ರೀತಿಯಲ್ಲಿ

©KTBS NOT TO BE REPUBLISHED

ಮಾಡಿದ್ದರು. ಗ್ರಾಮದ ಬೀದಿಯಲ್ಲಿ ಮೆರವಣಿಗೆ ಮಾಡಲೆಂದು ಅಲಂಕೃತ ಜೀಪೊಂದನ್ನು ತರಿಸಿದ್ದರು. ಅದರ ಸುತ್ತ ಬಂದೂಕುಧಾರಿಗಳಾದ ಪೊಲೀಸರನ್ನು ಕಾವಲಿರಿಸಿದ್ದರು. ಅದನ್ನು ಕಂಡ ಜನರಲ್ ಜಿ.ಜಿ.ಬೇವೂರರು, “ನಾನೊಬ್ಬ ಸೈನಿಕ. ನನಗೇಕೆ ರಕ್ಷಣೆ? ಇದು ನನ್ನ ಊರು, ಇವರೆಲ್ಲ ನನ್ನ ಜನ” ಎಂದರು. ಜೀಪಿನಲ್ಲಿ ಕುಳಿತುಕೊಳ್ಳದೆ ತಮ್ಮ ಹೆಂಡತಿ ರಾಧಿಕಾಬಾಯಿಯವರೊಡನೆ ರೈತನ ಗಾಡಿಯೊಂದರಲ್ಲಿ ಹತ್ತಿ ಕುಳಿತರು. ಅನಂತರ ತಮ್ಮ ಊರಿನ ಜನರನ್ನು ಮಾತನಾಡಿಸುತ್ತ ಗ್ರಾಮದ ಓಣಿಗಳಲ್ಲಿ ನಡೆದುಕೊಂಡು ಹೋದರು. ಇದು ಅವರ ಸಜ್ಜನಿಕೆಯನ್ನು ತಿಳಿಸಿಕೊಡುತ್ತದೆ.

‘ಮಾತಿಗಿಂತ ಕೃತಿ ಲೇಸು’ ಎಂಬ ತತ್ತ್ವ ಜನರಲ್ ಬೇವೂರ ಅವರದು. ನಿವೃತ್ತಿಯ ಅನಂತರವೂ ಬೇವೂರರ ಸೇವೆಯು ಭಾರತ ಸರಕಾರಕ್ಕೆ ಆವಶ್ಯವಾಯಿತು. ಅವರ ಆಡಳಿತ ವೈಖರಿಯನ್ನು ಗುರುತಿಸಿ ಭಾರತ ಸರಕಾರವು ಡೆನ್ಮಾರ್ಕಿನ ರಾಯಭಾರಿಯನ್ನಾಗಿ ಎರಡು ವರ್ಷದ ಅವಧಿಗೆ ನೇಮಿಸಿತು.

ಬೇವೂರಿನ ವರಪುತ್ರ ಭಾರತದ ಒಂಬತ್ತನೆಯ ಮಹಾದಂಡನಾಯಕರಾಗಿ ಸೇವೆ ಸಲ್ಲಿಸಿದ ಸಹೃದಯಿಯಾದ ಜಿ.ಜಿ.ಬೇವೂರರು ೧೯೮೯ ಅಕ್ಟೋಬರ್ ೨೪ರಂದು ಇಹಲೋಕ ತ್ಯಜಿಸಿದರು. ಅವರ ಸಾಹಸದ ಗಾಥೆಗಳು ಭಾರತದ ಮಹಾದಂಡನಾಯಕರ ಚರಿತ್ರೆಯಲ್ಲಿ ಅಮರವಾಗಿ ಉಳಿದಿವೆ.

**ಕೌಶಲ** : ಬರೆಯುವುದು.

**ಸಾಮರ್ಥ್ಯ** : ಸರಳ ಕ್ರಿಯಾತ್ಮಕ ಸಾಂದರ್ಭಿಕ ಭಾಷಾಂಶ ನಿಯಮಗಳನ್ನು ಅರ್ಥಮಾಡಿಕೊಂಡು ಅವುಗಳನ್ನು ಬರೆವಣಿಗೆಯಲ್ಲಿ ಬಳಸುವುದು.

NOT TO BE REPUBLISHED @KTBS

## ಕೃತಿಕಾರರ ಪರಿಚಯ



**ಡಾ. ಬಸವರಾಜ ಹಲ್ಲಿ**ಯವರು ೦೧-೦೬-೧೯೫೫ ರಂದು **ಬಾಗಲಕೋಟೆ ಜಿಲ್ಲೆಯ ಬೇವೂರಿನಲ್ಲಿ** ಜನಿಸಿದರು. ತಂದೆ ಚನ್ನಪ್ಪ, ತಾಯಿ ಚನ್ನವ್ವ. ಲೇಖಕರು ೧೯೯೭ರಲ್ಲಿ **ಮುಳಗುಂದದ ಬಾಲಲೀಲಾ ಮಹಾಂತ ಶಿವಯೋಗಿಗಳ** ಕುರಿತ ಮಹಾಪ್ರಬಂಧಕ್ಕೆ **ಡಾಕ್ಟರೇಟ್** ಪದವಿ ಪಡೆದಿದ್ದಾರೆ. ಶ್ರೀ ತಮ್ಮಣ್ಣಪ್ಪ ಚಿಕ್ಕೋಡಿ ಕಲಾ ಮಹಾವಿದ್ಯಾಲಯದಲ್ಲಿ ಕಳೆದ ೨೫ ವರ್ಷಗಳಿಂದ ಸೇವೆ ಸಲ್ಲಿಸಿದ್ದಾರೆ. **ಬೇವೂರಿನ ಅಪರೂಪದವರು. ಅಕ್ಕನ ಬಳಗ** ಮುಂತಾದವು ಅವರ ಕೃತಿಗಳು. ಪ್ರಸ್ತುತ ಪಾಠವನ್ನು ಅವರ **‘ವೀರ ಸೇನಾನಿ ಜನರಲ್ ಜಿ.ಜಿ.ಬೇವೂರ’** ಎಂಬ ಪುಸ್ತಕದಿಂದ ಆಯ್ದುಕೊಳ್ಳಲಾಗಿದೆ.

## ಪದಗಳ ಅರ್ಥ

ಅಲಂಕೃತ – ಅಲಂಕಾರ ಮಾಡಿದ, ಸಿಂಗರಿಸಿದ.
ಉತ್ತುಂಗ – ಶ್ರೇಷ್ಠ
ಕಾವಲಿರಿಸು – ರಕ್ಷಿಸು
ಕೃತಿ – ಕೆಲಸ
ಗಾಡಿ – ಚಕ್ಕಡಿ, ಬಂಡಿ.
ಗಾಥೆ – ಕತೆ, ಘಟನೆ.
ಗ್ರಾಮದ ಓಣಿ – ಹಳ್ಳಿಯ ಬೀದಿ.
ಜನ್ಮತಾಳು – ಹುಟ್ಟು, ಜನಿಸು.
ದುರ್ಗಮ – ಹೋಗಲು ಅಸಾಧ್ಯವಾದ.
ಫೀಲ್ಡ್ – ಭೂಭಾಗ.
ಫೀಲ್ಡ್ ಮಾರ್ಷಲ್ – ಭೂಸೇನೆಯಲ್ಲಿ ವಿಶೇಷ ಪರಿಣತಿಯನ್ನು ಪಡೆದವರಿಗೆ ಕೊಡುವ ಅತ್ಯುನ್ನತ ಪದವಿ.
ಮಹಾದಂಡನಾಯಕರು – ಸೇನಾ ವರಿಷ್ಠ, ಸೈನ್ಯದ ಅತಿ ಹಿರಿಯ ಅಧಿಕಾರಿ.
ನೇತೃತ್ವ – ಮುಂದಾಳತ್ವ, ಹಿರಿತನ.
ಲೇಸು – ಒಪ್ಪಿತ, ಒಳ್ಳೆಯದು.
ಸಜ್ಜನಿಕೆ – ಒಳ್ಳೆಯತನ.

©KTBS NOT TO BE REPUBLISHED

## ಅಭ್ಯಾಸ

### ಅ. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

೧. ಬೇವೂರರು ಯಾವಾಗ ಜನಿಸಿದರು?

೨. ಬೇವೂರರ ತಂದೆ ತಾಯಿಯರ ಹೆಸರೇನು?

೩. ಗೋಪಾಲರಾಯರ ಸ್ವಂತ ಊರು ಯಾವುದು?

೪. ಬೇವೂರರನ್ನು ಬಿಗಿದಪ್ಪಿ ಪ್ರಶಂಸಿಸಿದವರು ಯಾರು?

೫. ಭಾರತ ಸರಕಾರವು ಬೇವೂರರನ್ನು ಎರಡು ವರ್ಷದ ಅವಧಿಗೆ ಯಾವ ಕಾರ್ಯಕ್ಕೆ ನೇಮಿಸಿತು?

## ಆ. ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.

೧. ಗೋಪಾಲರಾಯರು ಎಲ್ಲಿ ಸೈನಿಕ ಶಿಕ್ಷಣ ಪಡೆದರು?

೨. ಬೇವೂರರ ನೇತೃತ್ವದ ಸೈನಿಕ ತುಕಡಿಯ ಸಾಹಸವನ್ನು ವಿವರಿಸಿರಿ?

೩. ಬೇವೂರರ ಸಜ್ಜನಿಕೆಯನ್ನು ಉದಾಹರಣೆಯೊಂದಿಗೆ ತಿಳಿಸಿರಿ.

೪. ನಿವೃತ್ತಿ ನಂತರವೂ ಬೇವೂರರ ಸೇವೆ ಭಾರತ ಸರಕಾರಕ್ಕೆ ಆವಶ್ಯಕವೆನಿಸಿದ ಸಂದರ್ಭ ಯಾವುದು?

## ಇ. ಬಿಟ್ಟ ಸ್ಥಳಗಳನ್ನು ತುಂಬಿರಿ.

೧. ಗೋಪಾಲರಾಯರ ತಂದೆ ________ ತಾಯಿ ____________

೨. ಗೋಪಾಲರಾಯರು ತಮ್ಮ ವಿದ್ಯಾರ್ಥಿ ಜೀವನದಲ್ಲಿಯೇ ___________ ಖಡ್ಗ ಮತ್ತು __________ ಪದಕ ಪಡೆದಿದ್ದರು.

೩. "ಯುವಜನರು ನಾಳೆಯ __________ ರಾಗಬೇಕು" ಎಂಬುದು ಅವರ ಬಯಕೆಯಾಗಿತ್ತು.

೪. ಡಾರ್ಜಿಲಿಂಗ್‌ನಲ್ಲಿ ಕಟ್ಟಿಸಿದ _____________ ಭವನಕ್ಕೆ ಜಿ.ಜಿ. ಬೇವೂರರ ಹೆಸರಿಟ್ಟಿದ್ದಾರೆ.

೫. "ನಾನೊಬ್ಬ __________ ನನಗೇಕೆ ರಕ್ಷಣೆ? ಇದು ನನ್ನ ಊರು. ಇವರೆಲ್ಲ ನನ್ನ __________" ಎಂದರು.

@KTBS NOT TO BE REPUBLISHED

## ವ್ಯಾಕರಣ ಮಾಹಿತಿ

## ಅ. ಲೇಖನ ಚಿಹ್ನೆಗಳು

ನಾವು ಬರೆದ ವಿಚಾರಗಳು ಓದುಗರಿಗೆ ಸ್ಪಷ್ಟವಾಗಿ ಅರ್ಥವಾಗಲೆಂದು ಅಲ್ಲಲ್ಲಿ ಉಪಯೋಗಿಸುವ ಚಿಹ್ನೆಗಳಿಗೆ ಲೇಖನ ಚಿಹ್ನೆಗಳೆಂದು ಕರೆಯುವರು.

### ಲೇಖನ ಚಿಹ್ನೆಗಳು

೧. ಪೂರ್ಣವಿರಾಮ ಚಿಹ್ನೆ (.)

೨. ಅರ್ಧವಿರಾಮ ಚಿಹ್ನೆ (;)

೩. ಅಲ್ಪ ವಿರಾಮ ಚಿಹ್ನೆ (,)

೪. ಪ್ರಶ್ನಾರ್ಥಕ ಚಿಹ್ನೆ (?)

೫. ಭಾವಸೂಚಕ ಚಿಹ್ನೆ (!)

೬. ಉದ್ಧರಣ ಚಿಹ್ನೆ (“ ”)

೭. ಆವರಣ ಚಿಹ್ನೆ ( )

೮. ಸಮಾನಾರ್ಥಕ ಚಿಹ್ನೆ (=)

೯. ವಿವರಣ ಚಿಹ್ನೆ (: / :–)

೧೦. ವಾಕ್ಯವೇಷ್ಟನ ಚಿಹ್ನೆ (‘ ’)

## ಭಾಷಾಭ್ಯಾಸ

**ಅ. ಕೆಳಗಿನ ಕಥೆ ನಕಲು ಮಾಡಿ, ಸೂಕ್ತ ಲೇಖನ ಚಿಹ್ನೆಗಳನ್ನು ಬಳಸಿರಿ.**

ಸುಂದರವಾದ ಒಂದು ತೋಪು ಅಲ್ಲಿ ತೆಂಗು ತಾಳೆ ಬಾಳೆ ಮಾವು ಹಾಗೂ ರಸತುಂಬಿದ ನೇರಲ ಹಣ್ಣುಗಳಿದ್ದವು ಗಿಳಿರಾಯ ಹಣ್ಣುಗಳನ್ನು ಕುಕ್ಕಿಕುಕ್ಕಿ ರುಚಿ ಹೀರುತ್ತ ತನ್ನ ಮಿತ್ರನಿಗೆ ಹೇಳಿತು ಆಹಾ ಎಂಥ ಸಿಹಿ ಸವಿಯುತ್ತೇನೆ ಮಿತ್ರ ಬಾ ನೀನು ಈ ರುಚಿಯನ್ನು ಹೀರು ಎಂದಿತು ಆಗ ಗೆಳೆಯ ಗಿಳಿರಾಯ ನದಿಯ ದಡದಲ್ಲಿರುವ ವಿವಿಧ ಹಣ್ಣುಗಳ ಸಿಹಿಯನ್ನು ನೀನು ಸವಿದಿರುವೆಯಾ ನನ್ನೊಡನೆ ಬಾ ನದಿಯ ದಡದಲ್ಲಿರುವ ಮರಗಳಿಂದ ವಿಧವಿಧವಾದ ಹಣ್ಣುಗಳ ರುಚಿಯನ್ನು ಸವಿಯುವಿಯಂತೆ ಎಂದು ಗೆಳೆಯನನ್ನು ಕರೆದುಕೊಂಡು ಹೋಯಿತು

★★★★★

© KTBS NOT TO BE REPUBLISHED

# ೮. ಸಂಗೊಳ್ಳಿ ರಾಯಣ್ಣ

Z1A3E4

– ಎಚ್.ಎಸ್. ಸತ್ಯನಾರಾಯಣ

**ಪ್ರವೇಶ :** ಇತಿಹಾಸದಿಂದ ನಾವು ಕಲಿಯಬೇಕಿರುವುದು ಬಹಳಷ್ಟಿದೆ. ಸ್ವಾತಂತ್ರ್ಯ ಚಳವಳಿಯ ಸಂದರ್ಭದಲ್ಲಿ ನಾಡಿಗಾಗಿ ಹೋರಾಡಿ, ಮಡಿದ ಅನೇಕ ವೀರರ ಸಾಹಸ, ತ್ಯಾಗ, ಛಲ, ಸಂಕಲ್ಪಶಕ್ತಿ ಮುಂತಾದ ಗುಣಗಳು ನಮಗೆ ದಾರಿದೀಪವಾಗಿವೆ. ಸಾಮಾನ್ಯರಲ್ಲೂ ಪ್ರಕಟವಾಗಬಹುದಾದ ಅಸಾಮಾನ್ಯ ದೇಶಭಕ್ತಿ, ನಿಷ್ಠೆ, ಪರಾಕ್ರಮಗಳು ರಾಜ-ಮಹಾರಾಜರಲ್ಲದವರನ್ನೂ ಸದಾ ಹೆಮ್ಮೆಯಿಂದ ಸ್ಮರಿಸುವಂತೆ ಮಾಡಿರುವುದನ್ನು ನಮ್ಮ ಇತಿಹಾಸದ ಪುಟಗಳು ಸಾರುತ್ತಿವೆ. ನಾಡು-ನುಡಿಯ ರಕ್ಷಣೆಯ ಸಂದರ್ಭ ಎದುರಾದಾಗ ಶ್ರೀಸಾಮಾನ್ಯರು ಯಾವ ಜವಾಬ್ದಾರಿಯನ್ನು ಹೊರಬೇಕೆಂಬುದಕ್ಕೆ ಕನ್ನಡ ನಾಡಿನ ವೀರಾಗ್ರಣಿ ಎನಿಸಿದ ಸಂಗೊಳ್ಳಿ ರಾಯಣ್ಣನಂತಹ ದೇಶಪ್ರೇಮಿ ನಮಗೆ ಸ್ಫೂರ್ತಿಶಕ್ತಿಯನ್ನು ನಿರಂತರವಾಗಿ ತುಂಬುತ್ತಲೇ ಇರುತ್ತಾರೆ. ಹೊಸಕಾಲದ ಸವಾಲುಗಳನ್ನೆದುರಿಸುವ ಮಕ್ಕಳಿಗೆ ರಾಯಣ್ಣನ ಕಥೆ ಒದಗಿಸುವ ಪ್ರೇರಣೆ ಅಪಾರವಾದುದೆಂಬ ಆಶಯ ಇಲ್ಲಿದೆ.

© KTBS NOT TO BE REPUBLISHED



ಕರ್ನಾಟಕ ಜನರಿಗೆ ಕಿತ್ತೂರಿನ ಹೆಸರನ್ನು ಕೇಳಿದಾಕ್ಷಣ ನೆನಪಿಗೆ ಬರುವ ಹೆಸರುಗಳೆಂದರೆ ರಾಣಿ ಚೆನ್ನಮ್ಮ ಹಾಗೂ ಸಂಗೊಳ್ಳಿ ರಾಯಣ್ಣ ಎಂಬುವು. ಇದರ ಜೊತೆಗೆ ಸ್ವಾಮಿಕಾರ್ಯಕ್ಕೆ ಜೀವತೆತ್ತ ವೀರಾಗ್ರಣಿ ರಾಯಣ್ಣನ ಬದುಕಿನ ಚಿತ್ರ ಸ್ಮೃತಿಪಟಲದಲ್ಲಿ ತೇಲಿಬರುತ್ತದೆ. ನಾಡ ಉಳಿವಿಗಾಗಿ ಹೋರಾಡುವುದು ಕೇವಲ ರಾಜರ ಕೆಲಸವಲ್ಲ. ಅದು ಸಾಮಾನ್ಯ ಜನತೆಯ ಆದ್ಯ ಕರ್ತವ್ಯವೂ ಹೌದು ಎಂಬುದನ್ನು ತೋರಿಸಿಕೊಟ್ಟ ಕಲಿ ಸಂಗೊಳ್ಳಿ ರಾಯಣ್ಣ. ಕಿತ್ತೂರು ಸಂಸ್ಥಾನವು ಬ್ರಿಟಿಷರ ವಶವಾದ ನಂತರ ಸ್ವಾತಂತ್ರ್ಯಪ್ರಿಯರೆಲ್ಲ ಸಂಗೊಳ್ಳಿ ರಾಯಣ್ಣನ ಮುಂಚೂಣಿ ನಾಯಕತ್ವದಲ್ಲಿ ಜೊತೆಸೇರಿ, ಹೋರಾಟ ನಡೆಸಿ ಅವರನ್ನು ಹೊಡೆದೋಡಿಸುವ ಸಾಹಸ ಮಾಡಿದರು. ಇದರಿಂದಾಗಿ ಸಂಗೊಳ್ಳಿ ರಾಯಣ್ಣನ ನೆನಪು ಇತಿಹಾಸದ ಪುಟದಲ್ಲಿ ಉಳಿಯುವಂತಾಯ್ತು.

ಸಂಗೊಳ್ಳಿ ರಾಯಣ್ಣನ ಬದುಕಿನ ವಿವರಗಳು ಇತಿಹಾಸದಲ್ಲಿ ದಾಖಲಾಗಿರುವುದಕ್ಕಿಂತ ಲಾವಣಿಯಂತಹ ಜಾನಪದ ಸಾಹಿತ್ಯದಲ್ಲಿ ಸೇರಿಹೋಗಿರುವುದೇ ಹೆಚ್ಚು. ರಾಯಣ್ಣ ಲಾವಣಿಗಳಲ್ಲಿ

ಉಳಿದಿರುವುದು ಅವನ ಜನಪ್ರಿಯತೆಗೆ ಸಾಕ್ಷಿಯನ್ನೊದಗಿಸುತ್ತದೆ. ರಾಯಣ್ಣನ ಊರು ಸಂಗೊಳ್ಳಿ. ಇದು ಬೆಳಗಾವಿ ಜಿಲ್ಲೆಯ ಸಂಪಗಾವಿ ತಾಲ್ಲೂಕಿನ ಒಂದು ಪುಟ್ಟಹಳ್ಳಿ, ಸಂಗೊಳ್ಳಿಯ ಹೊರತಾಗಿ ರಾಯಣ್ಣನನ್ನು ಕಲ್ಪಿಸಿಕೊಳ್ಳಲು ಸಾಧ್ಯವೇ ಇಲ್ಲವೆಂಬಷ್ಟು ಎರಡೂ ಹೆಸರುಗಳು ಬೆರೆತುಹೋಗಿವೆ. ರಾಯಣ್ಣ ಸಂಗೊಳ್ಳಿಯಲ್ಲಿ ೧೫ ಆಗಸ್ಟ್ ೧೭೯೮ ರಂದು ಜನಿಸಿದನು. ಆಗಸ್ಟ್ ೧೫ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದ ಹಬ್ಬದ ದಿನ. ರಾಯಣ್ಣನ ತಂದೆಯ ಹೆಸರು ಭರಮಪ್ಪ, ತಾಯಿ ಶ್ರೀಮತಿ ಕೆಂಚವ್ವ. ಅಜ್ಜ-ಮುತ್ತಜ್ಜರಿಂದ ವೀರಪರಂಪರೆ ಹೊಂದಿದ್ದ ಮನೆತನ ಇವರದು. ರಾಯಣ್ಣನ ತಾತನಾದ ರಾಗಪ್ಪ ಎಂಬುವವರು ಅಂದಿನ ಕಿತ್ತೂರು ದೊರೆ ವೀರಪ್ಪ ದೇಸಾಯಿಯಿಂದ 'ಸಾವಿರ ಒಂಟೆ ಸರದಾರ' ಎಂಬ ಬಿರುದನ್ನು ಪಡೆದಿದ್ದರು. 'ಚಿಣಗಿ ಕೋವಾಡ' ಯುದ್ಧದಲ್ಲಿ ತೋರಿದ ಅಪ್ರತಿಮ ಶೌರ್ಯದಿಂದ ರಾಯಣ್ಣನ ತಾತ ಈ ಬಿರುದನ್ನು ಪಡೆದಿದ್ದರು. ರಾಯಣ್ಣನಿಗೆ ಸಹಜವಾಗಿಯೇ ಯೋಧನೊಬ್ಬನಿಗಿರಬೇಕಾದ ಲಕ್ಷಣಗಳೆಲ್ಲವೂ ರಕ್ತಗತವಾಗಿ ಬಂದಿದ್ದವು.

ರಾಯಣ್ಣ ಕಿತ್ತೂರು ಸಂಸ್ಥಾನದ ಸಾಮಾನ್ಯ ಪ್ರಜೆಯಾಗಿದ್ದವನು. ಸಂಗೊಳ್ಳಿಗ್ರಾಮದ ತಳವಾರಿಯಾಗಿ ನೇಮಕಗೊಂಡವನು, ಹಲವಾರು, ದೇಶಭಕ್ತರೊಂದಿಗೆ ಬ್ರಿಟಿಷರ ವಿರುದ್ಧ ಅಹೋರಾತ್ರಿ ಹೋರಾಡಿದ್ದರಿಂದ ಕಾರಾಗೃಹವಾಸವನ್ನು ಅನುಭವಿಸಬೇಕಾಯಿತು. ತಮ್ಮ ವಿರುದ್ಧ ಹೋರಾಡಿದನೆಂಬ ಕಾರಣಕ್ಕೆ ಬ್ರಿಟಿಷ್ ಸರ್ಕಾರ ರಾಯಣ್ಣನ ಮನೆತನಕ್ಕೆ ಸೇರಿದ್ದ ಭೂಮಿಯನ್ನು ವಶಪಡಿಸಿಕೊಂಡುಬಿಟ್ಟಿತು. ರಾಯಣ್ಣನಿಗೆ ಊರಿನ ಕುಲಕರ್ಣಿ ಬಾಳಪ್ಪನಿಗೆ ಇದ್ದುದಕ್ಕಿಂತ ಹೆಚ್ಚಿನ ಜಮೀನಿತ್ತು! ಬ್ರಿಟಿಷರ ಕೃತ್ಯದಿಂದ ರಾಯಣ್ಣ ಕ್ರೋಧಗೊಂಡನು. ಅಲ್ಲದೆ, ಕಿತ್ತೂರಿನ ಸ್ವಾತಂತ್ರ್ಯವನ್ನು ಪುನಃ ಸ್ಥಾಪಿಸಬೇಕೆಂಬ ಇವನ ಉದಾತ್ತ ಧ್ಯೇಯವು ಇವನ ದೇಶಾಭಿಮಾನವನ್ನು ಬಲವಾಗಿ ಕೆರಳಿಸಿತು. ಸೈನ್ಯದ ಬಲವಿಲ್ಲದ ಆತ ಮನೋಬಲವನ್ನೇ ನಂಬಿಕೊಂಡು ಬ್ರಿಟಿಷರ ವಿರುದ್ಧ ಹೋರಾಡಲು ಶೂರಸಾಹಸಿಗಳ ಗುಂಪನ್ನು ಕಟ್ಟಿ ಬಂಡಾಯವೆಬ್ಬಿಸಿದನು. ಅನೇಕ ಯುವಕರು ರಾಯಣ್ಣನ ಬೆಂಬಲಕ್ಕಿದ್ದರು. ಇದಕ್ಕೆ ಮುಖ್ಯ ಕಾರಣ ರಾಯಣ್ಣನಲ್ಲಿದ್ದ ಅಚಲವಾದ ದೇಶಭಕ್ತಿ.

ಸಂಗೊಳ್ಳಿ ರಾಯಣ್ಣನ ಸಾಹಸಗಳು ಹಲವಾರು. ಕಿತ್ತೂರಿನ ರಾಣಿ ಚೆನ್ನಮ್ಮನ ದತ್ತುಪುತ್ರನಾದ ಶಿವಲಿಂಗಪ್ಪನನ್ನು ಕಿತ್ತೂರಿನ ಸಿಂಹಾಸನದಲ್ಲಿ ಕುಳ್ಳಿರಿಸಲು ಮಾಡಿದ ಸಾಹಸ ಅತ್ಯಂತ ದೊಡ್ಡದು ಮತ್ತು ಮುಖ್ಯವಾದದ್ದು. ಆಗ ದತ್ತುಮಕ್ಕಳಿಗೆ ಹಕ್ಕಿಲ್ಲವೆಂಬ ಕಾನೂನನ್ನು ಬ್ರಿಟಿಷರು ಜಾರಿಗೊಳಿಸಿದ್ದರು. ಈ ಮೂಲಕ ಕಿತ್ತೂರಿನಲ್ಲಿ ಬ್ರಿಟಿಷ್ ಸರಕಾರದ ಅಸ್ತಿತ್ವವನ್ನು ಧಿಕ್ಕರಿಸುವ ಎದೆಗಾರಿಕೆಯನ್ನು ರಾಯಣ್ಣ ತೋರಿದನು. ಸೈನ್ಯ ಸಹಾಯವಿಲ್ಲದ ರಾಯಣ್ಣ ಬ್ರಿಟಿಷರ ವಿರುದ್ಧದ ಹೋರಾಟಕ್ಕೆ ಗೆರಿಲ್ಲಾಯುದ್ಧ ಅಥವಾ ಕೂಟಯುದ್ಧವನ್ನು ರೂಪಿಸಿ ಅವರನ್ನು ಬೆಚ್ಚಿಬೀಳಿಸಿದ.

ಮೊದಲಿಗೆ, ಖಾನಾಪುರದಲ್ಲಿ ನೆಲೆಸಿದ್ದ ಮೇಜರ್ ಪಿಕ್ಕರಿಂಗ್‌ನ ಸೈನ್ಯದ ಮೇಲೆ ದಾಳಿ ನಡೆಸಿದನು. ಅಲ್ಲಿನ ಸರ್ಕಾರಿ ಕಛೇರಿಯನ್ನು ಸುಟ್ಟುಹಾಕುವ ಮೂಲಕ ಬ್ರಿಟಿಷ್ ಆಡಳಿತದ ವಿರುದ್ಧ ತನ್ನ ಪ್ರತಿಭಟನೆಯನ್ನು ಈ ಮೂಲಕ ದಾಖಲಿಸಿದ. ಹಗಲು ಹೊತ್ತನ್ನು ಕಾಡಿನಲ್ಲಿ

©KTBS NOT TO BE REPUBLISHED

ಕಳೆದು, ರಾತ್ರಿವೇಳೆ ತನ್ನ ಅನೇಕ ಯೋಧರೊಡನೆ ಬ್ರಿಟಿಷರ ಬೀಡಿನ ಮೇಲೆ ಎರಗುತ್ತಿದ್ದ. ಈತನು ಗೆರಿಲ್ಲಾಯುದ್ಧ ತಂತ್ರದಲ್ಲಿ ಪಳಗಿದ್ದವನು. ಕಾಡಿನ ಮರಗಳ ಮೇಲೋ ಬಂಡೆಗಳ ಕೆಳಗೋ ಸಹಚರರೊಂದಿಗೆ ಅಡಗಿ ಕುಳಿತಿದ್ದು, ಅನಿರೀಕ್ಷಿತವಾಗಿ ಶತ್ರುಗಳ ಮೇಲೆ ಎರಗಿ ಅವರನ್ನು ಕಕ್ಕಾಬಿಕ್ಕಿಯಾಗಿಸಿ ಮಣಿಸುವುದು ಈ ಯುದ್ಧದ ಮುಖ್ಯ ತಂತ್ರ. ರಾಯಣ್ಣನ ನಾಯಕತ್ವವನ್ನು ಒಪ್ಪಿ ಸರಿಸುಮಾರು ಇಡೀ ಕಿತ್ತೂರು ಸಂಸ್ಥಾನದ ಪ್ರಜೆಗಳೆಲ್ಲ ಇವನ ಬೆಂಗಾವಲಿಗರಾಗಿದ್ದರು. ಮೋಸದಿಂದ ಬ್ರಿಟಿಷರ ಪಕ್ಷವಹಿಸುವವರ ವಿಚಾರದಲ್ಲಿ ರಾಯಣ್ಣ ನಿರ್ದಾಕ್ಷಿಣ್ಯವಾಗಿರುತ್ತಿದ್ದ. ಇವನ ಕಾರ್ಯಗಳಿಂದ ಬೆಚ್ಚಿಬಿದ್ದ ಬ್ರಿಟಿಷ್ ಅಧಿಕಾರಿಗಳು ತಮ್ಮ ರಕ್ಷಣೆಗಾಗಿ ಸೈನ್ಯದ ನೆರವನ್ನು ಕೋರಬೇಕಾಯಿತು. ಖಾನಾಪುರದ ದಾಳಿಯ ನಂತರ ರಾಯಣ್ಣ ಸಂಪಗಾವದ ಮೇಲೆ ದಾಳಿ ಮಾಡಿದ. ಅಲ್ಲಿನ ಖಜಾನೆಯನ್ನು ಸೂರೆಮಾಡಿ, ಹಲವು ಹಳ್ಳಿಗಳ ಮೇಲೂ ಎರಗಿ ಧನಸಂಗ್ರಹ ಮಾಡಿ, ಬ್ರಿಟಿಷರ ನಿಗ್ರಹಕ್ಕೆ ಹಗಲಿರುಳೂ ಪ್ರಯತ್ನಿಸಿದ. ಬಲಾಢ್ಯ ಬ್ರಿಟಿಷ್ ಪಡೆಯನ್ನೇ ಚಿಂತೆಗೀಡುಮಾಡುವ ಸಿಂಹಸ್ವಪ್ನವಾಗಿ ಸಂಗೊಳ್ಳಿ ರಾಯಣ್ಣ ಬೆಳೆದಿದ್ದ. ಸರ್ಕಾರಿ ಅಧಿಕಾರಿಗಳು ಇವನನ್ನು ಸೆರೆಹಿಡಿಯಲು ತಿಣುಕಾಡಿದರೂ ಅವರಿಗೆ ಚಳ್ಳೇಹಣ್ಣು ತಿನ್ನಿಸಿ ನುಣುಚಿಕೊಳ್ಳುವುದರಲ್ಲಿ ನಿಪುಣನಾಗಿದ್ದ.

ರಾಯಣ್ಣ ಬ್ರಿಟಿಷರ ವಿರುದ್ಧ ನಿರಂತರವಾಗಿ ತನ್ನದೇ ತಂತ್ರಗಾರಿಕೆಯಿಂದ ಹೋರಾಡುತ್ತಲೇ ಬಂದ. ನಾಲ್ಕು ತಿಂಗಳಕಾಲ ಸತತವಾಗಿ ಪ್ರತಿರೋಧ ತೋರಿದ ರಾಯಣ್ಣನನ್ನು ಯುದ್ಧಮಾಡಿ ಸೆರೆಹಿಡಿಯುವುದು ಅಸಾಧ್ಯವೆಂದು ಮನಗಂಡ ಬ್ರಿಟಿಷ್ ಸರಕಾರ ಕಪಟ ಜಾಲವೊಡ್ಡಿ, ದೇಶದ್ರೋಹಿಗಳ ಸಹಾಯದಿಂದ ಸೆರೆಹಿಡಿದು ವಿಚಾರಣೆಗೊಳಪಡಿಸಿತು. ರಾಯಣ್ಣನನ್ನು ಬಂಧಿಸಿದ ನಂತರ ಆತನ ನಾಲ್ಕುನೂರು ಜನ ಸಹಚರರೂ ಶರಣಾಗತರಾದರು. ರಾಯಣ್ಣನು ತಾನು ನಾಡಿನ ಹಿತಕ್ಕಾಗಿ ಈ ಕಾರ್ಯಗಳನ್ನೆಲ್ಲಾ ಮಾಡಬೇಕಾಯಿತೆಂದು ಒಪ್ಪಿಕೊಂಡನು. ವಿಚಾರಣೆ ನಡೆಸಿದ ವಿಶೇಷ ನ್ಯಾಯಾಲಯವು ಇವನನ್ನು ತಪ್ಪಿತಸ್ಥನೆಂದು ಘೋಷಿಸಿದ್ದರಿಂದ, ಮರಣದಂಡನೆಯನ್ನು ವಿಧಿಸಲಾಯಿತು.

ಮರಣದಂಡನೆಗೊಳಪಟ್ಟ ರಾಯಣ್ಣನನ್ನು ಅವನ ಮುಖ್ಯ ಕಾರ್ಯಕ್ಷೇತ್ರವಾದ ನಂದಗಡದಲ್ಲೇ ಗಲ್ಲಿಗೇರಿಸಿದರೆ ಜನ ಪಾಠ ಕಲಿಯುವರೆಂಬ ಉದ್ದೇಶದಿಂದ ಅಲ್ಲಿಗೆ ಕರೆತಂದು ವಧಾಸ್ಥಾನಕ್ಕೆ ಕರೆದೊಯ್ಯುತ್ತಿದ್ದಾಗ ಒಂದು ವಿಶಿಷ್ಟವಾದ ಸ್ಥಳದಲ್ಲಿ ತನ್ನ ದೇಹವನ್ನು ಸಮಾಧಿ ಮಾಡಬೇಕೆಂದು ರಾಯಣ್ಣನೇ ಸ್ಥಳವನ್ನು ತೋರಿಸಿದ್ದನಂತೆ. ೨೬ ಜನವರಿ ೧೮೩೧ ರಲ್ಲಿ ರಾಯಣ್ಣನನ್ನು ಗಲ್ಲಿಗೇರಿಸಿ, ಆತ ಬಯಸಿದಲ್ಲೇ ಸಮಾಧಿ ಮಾಡಲಾಯಿತು. ಅಲ್ಲಿ ಒಂದು ಆಲದಮರ ಬೆಳೆದಿದೆ. ರಾಯಣ್ಣನಿಗೊಂದು ಗುಡಿಯನ್ನೂ ಜನರು ಕಟ್ಟಿದ್ದಾರೆ. ರಾಯಣ್ಣನ ಸಮಾಧಿಯು ಈಗ ಭಕ್ತಿ ಗೌರವಗಳುಳ್ಳ ಜನರ ಪಾಲಿಗೆ ವೀರಗುಡಿಯ ರಾಯಣ್ಣನ ಗದ್ದುಗೆಯಾಗಿದೆ. ರಾಯಣ್ಣನ ನೆನಪು ಹಾಡುವ ಹಾಡುಗಳಲ್ಲಿ, ಲಾವಣಿಗಳಲ್ಲಿ ಹಸಿರಾಗಿ ಉಳಿದಿದೆ. ಅವನ ಧೀರಕ್ರಮಗಳು, ಶೌರ್ಯ ಸಾಧನೆಗಳು, ಚತುರ ಚಲನವಲನಗಳು, ವ್ಯೂಹಗಳು ಇವಕ್ಕೂ ಮಿಗಿಲಾಗಿ ಕಿತ್ತೂರಿನ

©KTBS NOT TO BE REPUBLISHED

ಸ್ವಾತಂತ್ರ್ಯ ಸಾಧನೆಯ ಘನೋದ್ಧಾರಕ್ಕಾಗಿ ಎಡೆಬಿಡದೆ ನಡೆಸಿದ ಪ್ರಯತ್ನಗಳು ಇವುಗಳ ಕಥೆ ಇಂದಿಗೂ ನಾಡಿನ ಜನರ ಕಣ್ಣಲ್ಲಿ ನೀರೂರಿಸಿ, ಎಲ್ಲರಲ್ಲೂ ದೇಶಪ್ರೇಮವನ್ನು ಉಕ್ಕಿಸುತ್ತಲೇ ಇವೆ. ಅಲ್ಲದೆ ಆತನ ಜನ್ಮದಿನ (ಆಗಸ್ಟ್ ೧೫ ಸ್ವಾತಂತ್ರ್ಯೋತ್ಸವ) ಮತ್ತು ಮರಣದಿನ (ಜನವರಿ ೨೬ ಗಣರಾಜ್ಯೋತ್ಸವ) ಗಳೆರಡೂ ನಮ್ಮ ರಾಷ್ಟ್ರೀಯ ಹಬ್ಬಗಳಾಗಿರುವುದೂ ರಾಯಣ್ಣನ ನೆನಪನ್ನು ದೇಶಭಕ್ತಿಯೊಂದಿಗೆ ಸ್ಮರಣೀಯವಾಗಿಸಿದೆ. ಇದೊಂದು ವಿಶೇಷಕರವಾದ ಸಂಗತಿ.

**ಕೌಶಲ** : ಬರೆಯುವುದು.

**ಸಾಮರ್ಥ್ಯ** : ಸರಳ ಸಾಂದರ್ಭಿಕ ಭಾಷಾಂಶ ನಿಯಮಗಳನ್ನು ಅರ್ಥಮಾಡಿಕೊಂಡು ಸೂಕ್ತ ಚಿಹ್ನೆಗಳನ್ನು ಬಳಸಿ ವಾಕ್ಯಗಳನ್ನು ಬರೆಯುವುದು.

## ಕೃತಿಕಾರರ ಪರಿಚಯ



***ಡಾ.ಎಚ್.ಎಸ್. ಸತ್ಯನಾರಾಯಣ*** *ಅವರು ಜನಿಸಿದ್ದು ಚಿಕ್ಕಮಗಳೂರಿನಲ್ಲಿ. ಶ್ರೀಮತಿ ಇಂದಿರಮ್ಮ- ಶ್ರೀ ಎಚ್.ಕೆ. ಶ್ರೀನಿವಾಸ ದಂಪತಿ ಇವರ ತಾಯಿ-ತಂದೆ. ಬಿ.ಎ. ಪದವಿಯನ್ನು ತೀನಂಶ್ರೀ ಸ್ಮಾರಕ ಚಿನ್ನದ ಪದಕದೊಂದಿಗೆ ಪಡೆದು, "ಪೂರ್ಣಚಂದ್ರ ತೇಜಸ್ವಿಯವರ ಕಥನ ಸಾಹಿತ್ಯದ ಸಾಂಸ್ಕೃತಿಕ ನೆಲೆಗಳು" ಎಂಬ ಪ್ರೌಢಪ್ರಬಂಧಕ್ಕೆ ಡಾಕ್ಟರೇಟ್ ಪದವಿ ಪಡೆದರು. ಸಾಹಿತ್ಯ ವಿಮರ್ಶೆ, ಲಲಿತ ಪ್ರಬಂಧ, ಅಂಕಣ ಬರಹಗಳಲ್ಲಿ ಕೃಷಿಮಾಡಿ ಅಪೂರ್ವ ಒಡನಾಟ, ಕುವೆಂಪು : ಅಲಕ್ಷಿತರೆದೆಯ ದೀಪ, ಕಣ್ಣೋಟ, ನುಡಿಚಿತ್ರ, ಪನ್ನೇರಳೆ, ನಗೆಮೊಗದ ಅಜ್ಜ ಮಾಸ್ತಿ, ಬಿದಿರ ತಡಿಕೆ, ಗಿರೀಶ್ ಕಾರ್ನಾಡ್ ಬದುಕು-ಬರಹ ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ಉದಯೋನ್ಮುಖ ವರ್ಧಮಾನ ಪ್ರಶಸ್ತಿ, ಸಾಹಿತ್ಯ ಪರಿಷತ್ತಿನ ದತ್ತಿ ಬಹುಮಾನ, ಹಿರೇಮಲ್ಲೂರು ಈಶ್ವರನ್ ರಾಜ್ಯ ಪ್ರಶಸ್ತಿ ಮುಂತಾದ ಗೌರವಗಳಿಗೆ ಪಾತ್ರರಾಗಿರುವ ಡಾ.ಎಚ್.ಎಸ್. ಸತ್ಯನಾರಾಯಣ ಅವರಿಗೆ ಕರ್ನಾಟಕ ಸರ್ಕಾರವು ೨೦೧೭ರ ಸಾಲಿನ ಅತ್ಯುತ್ತಮ ಉಪನ್ಯಾಸಕ ಎಂದು ರಾಜ್ಯ ಪ್ರಶಸ್ತಿಯನ್ನಿತ್ತು ಪುರಸ್ಕರಿಸಿದೆ. ಪ್ರಸ್ತುತ ಚಿಕ್ಕಮಗಳೂರಿನ ಬಸವನಹಳ್ಳಿ ಬಾಲಿಕಾ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರಾಗಿದ್ದಾರೆ.*

NOT TO BE REPUBLISHED ©KTBS

## ಪದಗಳ ಅರ್ಥ

ಸ್ಮೃತಿಪಟಲ – ನೆನಪಿನ ಸಂಗ್ರಹ
ಆದ್ಯ – ಮೊದಲ ಕರ್ತವ್ಯ
ಕಲಿ – ವೀರ
ಮುಂಚೂಣಿ – ಮೊದಲನೆಯ ಸಾಲಿನ
ಅಪ್ರತಿಮ – ಹೋಲಿಕೆಯಿಲ್ಲದ, ಸಾಟಿಯಿಲ್ಲದ

| | | |
|---|---|---|
| ರಕ್ತಗತ | – | ಹುಟ್ಟಿನೊಡನೆ ಸ್ವಭಾವಕ್ಕೆ ಅಂಟಿಕೊಂಡ |
| ಅಹೋರಾತ್ರಿ | – | ರಾತ್ರಿಪೂರ್ತಿ, ಇಡೀರಾತ್ರಿ |
| ಕ್ರೋಧ | – | ಕೋಪ, ಸಿಟ್ಟು |
| ಅಚಲವಾದ | – | ಸ್ಥಿರವಾದ, ಬದಲಾಗದ |
| ಎರಗು | – | ಮೇಲೆ ಬೀಳು |
| ಕಕ್ಕಾಬಿಕ್ಕಿ | – | ದಿಕ್ಕುತೋಚದಾಗು |
| ಸಹಚರರು | – | ಜೊತೆಗಾರರು |
| ಖಜಾನೆ | – | ಹಣಸಂಗ್ರಹಿಸುವ ಪೆಟ್ಟಿಗೆ; ತಿಜೋರಿ |
| ಸಿಂಹಸ್ವಪ್ನ | – | ಕನಸಿನಲ್ಲೂ ಹೆದರಿಸುವವನು |
| ಚಳ್ಳೇಹಣ್ಣು ತಿನ್ನಿಸು | – | ಮೋಸಗೊಳಿಸು |
| ನುಣುಚಿಕೋ | – | ತಪ್ಪಿಸಿಕೋ |
| ನಿಪುಣ | – | ನುರಿತ, ಪ್ರವೀಣನಾದ |
| ವಧಾಸ್ಥಾನ | – | ಕೊಲ್ಲುವ ಸ್ಥಳ |

## ಅಭ್ಯಾಸ

@KTBS
NOT TO BE REPUBLISHED

### ಅ. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

೧. ಸಂಗೊಳ್ಳಿ ರಾಯಣ್ಣ ಯಾವಾಗ, ಎಲ್ಲಿ ಜನಿಸಿದನು?
೨. ಸಂಗೊಳ್ಳಿ ರಾಯಣ್ಣನ ತಂದೆ–ತಾಯಿಗಳು ಯಾರು?
೩. ಸಂಗೊಳ್ಳಿ ರಾಯಣ್ಣನು ಯಾವ ಸಂಸ್ಥಾನದ ಬಿಡುಗಡೆಗಾಗಿ ಹೋರಾಡಿದನು?
೪. ಕಿತ್ತೂರಿನ ರಾಣಿಚೆನ್ನಮ್ಮನ ದತ್ತು ಪುತ್ರನ ಹೆಸರೇನು?
೫. ಸಂಗೊಳ್ಳಿ ರಾಯಣ್ಣನನ್ನು ಯಾವಾಗ ಗಲ್ಲಿಗೇರಿಸಲಾಯಿತು?

### ಆ. ಕೆಳಗಿನ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ.

೧. ಯಾವುದು ಆದ್ಯ ಕರ್ತವ್ಯವೆಂಬುದನ್ನು ಸಂಗೊಳ್ಳಿ ರಾಯಣ್ಣ ತೋರಿಸಿಕೊಟ್ಟಿದ್ದಾನೆ?
೨. 'ಸಾವಿರ ಒಂಟೆ ಸರದಾರ' ಎಂಬ ಬಿರುದು ಯಾರಿಗಿತ್ತು? ಏಕೆ?
೩. ಗೆರಿಲ್ಲಾ ಯುದ್ಧ ಎಂದರೇನು?
೪. ಸಂಗೊಳ್ಳಿ ರಾಯಣ್ಣನ ಅತ್ಯಂತ ದೊಡ್ಡ ಸಾಹಸ ಯಾವುದು?
೫. ಬ್ರಿಟಿಷ್ ಆಡಳಿತ ವಿರುದ್ಧ ತನ್ನ ಪ್ರತಿಭಟನೆಯನ್ನು ರಾಯಣ್ಣ ದಾಖಲಿಸಿದ್ದು ಹೇಗೆ?
೬. ನ್ಯಾಯಾಲಯದಲ್ಲಿ ರಾಯಣ್ಣ ತನ್ನ ಕಾರ್ಯಗಳ ಬಗ್ಗೆ ಯಾವ ಸಮರ್ಥನೆ ನೀಡಿದನು?

### ಇ. ಕೆಳಗಿನ ಪ್ರಶ್ನೆಗಳಿಗೆ ಐದು-ಆರು ವಾಕ್ಯಗಳಲ್ಲಿ ಉತ್ತರಿಸಿ.

೧. ಸಂಗೊಳ್ಳಿ ರಾಯಣ್ಣನ ನೆನಪು ನಾಡಿನ ಜನರಲ್ಲಿ ಉಳಿದಿರಲು ಕಾರಣಗಳನ್ನು ವಿವರಿಸಿ.

೨. ಸಂಗೊಳ್ಳಿ ರಾಯಣ್ಣನ ಯುದ್ಧತಂತ್ರಗಳನ್ನು ನಿಮ್ಮ ಮಾತುಗಳಲ್ಲಿ ವಿವರಿಸಿ.

### ಈ. ಕೊಟ್ಟಿರುವ ವಾಕ್ಯಗಳನ್ನು ಸಂದರ್ಭಸಹಿತ ವಿವರಿಸಿ.

೧. ನಾಡ ಉಳಿವಿಗಾಗಿ ಹೋರಾಡುವುದು ಕೇವಲ ರಾಜರ ಕೆಲಸವಲ್ಲ.

೨. ಆಗಸ್ಟ್ ಹದಿನೈದು ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದ ಹಬ್ಬದ ದಿನ.

೩. ಈತನು ಗೆರಿಲ್ಲಾ ಯುದ್ಧ ತಂತ್ರದಲ್ಲಿ ಪಳಗಿದ್ದವನು.

೪. ಎಲ್ಲರಲ್ಲೂ ದೇಶಪ್ರೇಮವನ್ನು ಉಕ್ಕಿಸುತ್ತಲೇ ಇವೆ.

## ವ್ಯಾಕರಣ ಮಾಹಿತಿ

### ಅ. ಸಮಾನಾರ್ಥಕ ಪದಗಳು

ಒಂದು ವ್ಯಕ್ತಿ, ಪ್ರಾಣಿ, ವಸ್ತು ಇತ್ಯಾದಿಗಳಿಗೆ ಅದೇ ಅರ್ಥವನ್ನು ಸೂಚಿಸುವ ಹಲವಾರು ಇತರ ಪದಗಳು ಇರುತ್ತವೆ. ಹೀಗೆ ಒಂದು ಶಬ್ದಕ್ಕೆ ಸಮಾನವಾದ ಅರ್ಥವನ್ನು ಕೊಡುವ ಮತ್ತೊಂದು ಶಬ್ದಕ್ಕೆ ಸಮಾನಾರ್ಥಕ ಪದ ಎನ್ನುವರು.

ಉದಾ:- ಕಾಯಕ=ಕೆಲಸ, ಉದ್ಯೋಗ, ಕಸಬು, ಊಳಿಗ, ದುಡಿಮೆ.

ತಂಡ=ಪಕ್ಷ, ಬಣ, ಗುಂಪು, ಪಡೆ, ದಳ, ಹಿಂಡು, ಸಮೂಹ.

ಪದ್ಮ=ಕಮಲ, ತಾವರೆ, ಅರವಿಂದ, ವನಜ, ಸರೋಜ.

ಭಾಷೆ=ಮಾತು, ನುಡಿ, ವಚನ, ಆಣೆ, ಪ್ರತಿಜ್ಞೆ, ನಂಬಿಗೆಯ ನುಡಿ, ಬೆಂಬಲದ ವಚನ.

### ಆ. ನಾನಾರ್ಥಕ ಪದಗಳು

ಒಂದು ಶಬ್ದವು ಇತರ ಹಲವಾರು ಅರ್ಥಗಳನ್ನು ಸೂಚಿಸುವಂತಿದ್ದರೆ ಅದನ್ನು ನಾನಾರ್ಥಕ ಪದವೆಂದು ಕರೆಯುವರು.

**ಉದಾ:** ದಂಡ = ೧. ಶಿಕ್ಷೆ, ೨. ಕೋಲು, ೩. ಸೈನ್ಯ

ದಳ = ೧. ಸೈನ್ಯ, ೨. ಎಲೆ, ೩. ಗುಂಪು

ಅಂಗ = ೧. ಭಾಗ, ೨. ದೇಹ

ಮಡಿ = ೧. ಸಾಯಿ, ೨. ಶುದ್ಧವಾದದ್ದು

NOT TO BE REPUBLISHED ©KTBS

## ಭಾಷಾಭ್ಯಾಸ

### ಅ. ಸೂಚನೆಗನುಗುಣವಾಗಿ ಈ ಕೆಳಗಿನ ಪ್ರಶ್ನೆಗಳನ್ನು ಉತ್ತರಿಸಿ.

೧. ಇವುಗಳ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ.
ಸಮಾನತೆ, ವಿರುದ್ಧ, ಅಚಲ, ರಕ್ಷಕ.

೨. ಇವುಗಳ ಸಮಾನಾರ್ಥಕ ಪದಗಳನ್ನು ಬರೆಯಿರಿ.
ಸ್ಮರಣೆ, ಸ್ಫೂರ್ತಿ, ಕ್ರೋಧ, ಯುದ್ಧ.

೩. ಇವುಗಳ ನಾನಾರ್ಥಕ ಪದಗಳನ್ನು ಬರೆಯಿರಿ.
ಕಲಿ, ಕರಿ, ಕಾಡು, ಮುನಿ.

೪. ಇವುಗಳನ್ನು ಸ್ವಂತ ವಾಕ್ಯಗಳಲ್ಲಿ ಬಳಸಿ ಬರೆಯಿರಿ.
ಕಕ್ಕಾಬಿಕ್ಕಿ, ಸಿಂಹಸ್ವಪ್ನ, ಚಳ್ಳೆಹಣ್ಣು, ಬೆಚ್ಚಿಬೀಳಿಸು.

### ಆ. ಯೋಜನೆ

೧. ಸಂಗೊಳ್ಳಿ ರಾಯಣ್ಣನ ಜೀವನ ವಿವರಗಳನ್ನು ಕುರಿತು ಒಂದು ಪುಟ್ಟ ಪ್ರಬಂಧ ರಚಿಸಿ.

೨. ಕಿತ್ತೂರಿಗೆ ಭೇಟಿ ನೀಡಿ, ಅಲ್ಲಿನ ಐತಿಹಾಸಿಕ ಸ್ಮಾರಕಗಳನ್ನು ಸಂದರ್ಶಿಸಿ.

### ಇ. ಓದಿಗೆ ಮನ್ನಣೆ

೧. ಸಂಗೊಳ್ಳಿ ರಾಯಣ್ಣನು ಕಿತ್ತೂರಿಗಾಗಿ ಹೋರಾಡಿದ ಕಥೆಯನ್ನು ಇತಿಹಾಸ ಪುಸ್ತಕಗಳಿಂದ ಸಂಗ್ರಹಿಸಿ, ಓದಿರಿ.

೨. ಮೈಸೂರು ವಿಶ್ವವಿದ್ಯಾಲಯದ ವಿಷಯ ವಿಶ್ವಕೋಶದಲ್ಲಿ ಸಂಗೊಳ್ಳಿ ರಾಯಣ್ಣನ ಬಗೆಗಿರುವ ಮಾಹಿತಿಯನ್ನು ಗಮನಿಸಿ.

★★★★★

© KTBS NOT TO BE REPUBLISHED

ಪದ್ಯ ಭಾಗ

Y6H9D4

# ೫. ಕರಡಿ ಕುಣಿತ

– ದ. ರಾ. ಬೇಂದ್ರೆ

**ಪ್ರವೇಶ :** 'ಕರಡಿ ಕುಣಿತ' ಕವನವು ಬೇಂದ್ರೆ ಅವರ ಸರಳ ಕವನಗಳಲ್ಲಿ ಒಂದು. ಈ ಕವನವನ್ನು ಓದುತ್ತ ಹೋದಂತೆ ಕವನದ ಒಡಲಿನಲ್ಲಿರುವ ಶೋಷಣೆಯ ಸಂಕೀರ್ಣತೆಯು ಅನುಭವವೇದ್ಯವಾಗುವುದು. ಈ ಕವನದ ಅಂತ್ಯದಲ್ಲಿ ಬೇಂದ್ರೆ ಅವರು ಮಾನವನ ಬುದ್ಧಿಯ ಕುಣಿತ ಎಲ್ಲ ಪ್ರಾಣಿಗಳ ಕುಣಿತಕ್ಕಿಂತ ಮಿಗಿಲಾದುದು ಎಂಬ ತತ್ತ್ವವನ್ನು ಸಾರುತ್ತಾರೆ.



ಕಬ್ಬಿಣ ಕೈಕಡಗ, ಕುಣಿಕೋಲು, ಕೂದಲು
ಕಂಬಳಿ ಹೊದ್ದಾಂವ ಬಂದಾನ!
ಗುಣುಗುಣುಗುಟ್ಟುತ ಕಡಗವ ಕುಟ್ಟುತ
ಕರಡಿಯನಾಡಿಸುತ ನಿಂದಾನ! ॥೧॥

ಯಾವ ಕಾಡಡವಿಯಲಿ ಜೇನುಂಡು ಬೆಳೆದಿದ್ದ
ಜಾಂಬವಂತನ ಹಿಡಿದು ತಂದಾನ?
'ಧಣಿಯರ ಮನಿಮುಂದ ಕಾವಲು ಮಾಡಣ್ಣ
ಧಣಿ ದಾನ ಕೊಡುವನು' ಅಂದಾನ. ॥೨॥

ತ್ರೇತಾಯುಗದ ರಾಮನ್ನ ದ್ವಾಪರದ ಕೃಷ್ಣನ್ನ
ಕಲಿಯುಗದ ಕಲ್ಕೀನ ಕಂಡಾನ.
ಜಾಂಬು ನದಿ ದಂಡೆಯ ಜಂಬುನೇರಲ ಹಣ್ಣು
ಕೃತಯುಗದ ಕೊನೆಗೀಂವಾ ಉಂಡಾನ. ॥೩॥

ಬಂದಾರೆ ಬರ್ರೆವ್ವ, ಕಂದನ ತರ್ರೆವ್ವ.
ಅಂಜೀಕಿ ಗಿಂಜೀಕಿ ಕೊಂದಾನ.
ರೋಮ ರೋಮಗಳಲ್ಲಿ ಭೀಮರಕ್ಷಿಯ ಬಲ
ಕೊರಳಾಗ ಕಟ್ಟಿರಿ ಒಂದಾನ. ॥೪॥

'ಕುಣಿಯಲೆ ಮಗನೆ ನೀ' ಅನ್ನೊದೊಂದೇ ತಡ
ತನ್ನಾಽಽನ ತಾನನ ತಂದಾನ.
ಮುದ್ದುಕೂಸಿನ ಹಾಂಗ ಮುಸುಮುಸು ಮಾಡುತ್ತ
ಕುಣಿದಾನ ಕುಣತ್ನಾಽಽವ ಛಂದಾನ. ॥೫॥

ಹೊಟ್ಟೆಗಿಲ್ಲದವರ ಹೊಟ್ಟೆಗೆ ಹಾಕಲು,
ನಡೆದಾನ ಪಡೆದಾನ ಬಂದ್ನಾಽಽನ.
'ಕುಣಿಸುವವರ ಹೊಟ್ಟಿ ತಣ್ಣಗಾಗಲಿ' ಎಂದು
ಮುಗಿಲಿಗೆ ಕೈಮುಗಿದು ನಿಂದಾನ. ॥೬॥

ಮನಬಲ್ಲ ಮಾನವ ಕುಣಿದಾನ ಕುಣಿಸ್ಯಾನ
ಪ್ರಾಣದ ಈ ಪ್ರಾಣಿ ಹಿಂದ್ನಾಽಽನ.
ಕರಡಿಯ ಹೆಸರೀಲೆ ಚರಿತಾರ್ಥ ನಡಿಸ್ಯಾನ
ಪರಮಾರ್ಥ ಎಂಬಂತೆ ಬಂದಾನ. ॥೭॥


ಈ ಮನಷಾ ಎಂದಿಂದೊ ಕವಲೆತ್ತು ಕೋಡಗ
ತನಗಾಗಿ ಕುಣಿಸುತ್ತ ನಡದಾನ.
ಕರಡೀ ಕುಣಿತಕ್ಕಿಂತ ನರರ ಬುದ್ಧಿಯ ಕುಣಿತ
ಮಿಗಿಲಹುದು ಕವಿ ಕಂಡು ನುಡಿದಾನ. ॥೮॥

© KTBS NOT TO BE REPUBLISHED

**ಕೌಶಲ** : ಓದುವುದು.

**ಸಾಮರ್ಥ್ಯ** : ಪದ್ಯವನ್ನು ಓದಿದ ಬಳಿಕ ಕೇಳಿದ ಪ್ರಶ್ನೆಗಳಿಗೆ ಉತ್ತರಿಸುವುದು.

## ಕೃತಿಕಾರರ ಪರಿಚಯ



**ದ. ರಾ. ಬೇಂದ್ರೆ : 'ಅಂಬಿಕಾತನಯದತ್ತ'** ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ ಶ್ರೀ ದತ್ತಾತ್ರೇಯ ರಾಮಚಂದ್ರ ಬೇಂದ್ರೆ ಅವರು **ಸಾ. ಶ. ೧೮೯೬ ರಲ್ಲಿ ಧಾರವಾಡದ ಸಾಧನಕೇರಿ**ಯಲ್ಲಿ ಜನಿಸಿದರು. ಇವರು ಪ್ರೌಢಶಾಲಾ ಅಧ್ಯಾಪಕರಾಗಿ, ಸೊಲ್ಲಾಪುರದ ರಾಜಾರಾಮ್ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ, ಧಾರವಾಡದ ಬಾನುಲಿ ಕೇಂದ್ರದ ಸಲಹೆಗಾರರಾಗಿ ಸೇವೆಯನ್ನು ಸಲ್ಲಿಸಿದ್ದಾರೆ. ಕನ್ನಡ ನವೋದಯ ಸಾಹಿತ್ಯದ ಪ್ರಮುಖ ಕವಿಗಳಲ್ಲಿ ಒಬ್ಬರಾದ ಇವರು **ಗರಿ, ನಾಕುತಂತಿ, ನಾದಲೀಲೆ, ಮೇಘದೂತ, ಗಂಗಾವತರಣ, ಸಖೀಗೀತ** ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಇವರ **ನಾಕುತಂತಿ** ಕವನ ಸಂಕಲನಕ್ಕೆ **ಭಾರತೀಯ ಜ್ಞಾನಪೀಠ ಪ್ರಶಸ್ತಿ**ಯು ಲಭಿಸಿದೆ. **ಭಾರತ ಸರ್ಕಾರದ ಪದ್ಮಶ್ರೀ ಪ್ರಶಸ್ತಿ, ಕೇಂದ್ರ ಮತ್ತು ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗೂ** ಭಾಜನರಾಗಿದ್ದಾರೆ.

©KTBS NOT TO BE REPUBLISHED

## ಪದಗಳ ಅರ್ಥ

ಕುಣಿಕೋಲು – ಕುಣಿಸುವವನು ಹಿಡಿದುಕೊಳ್ಳುವ ಕೋಲು.

ಕೈಕಡಗ – ಕೈಗೆ ಹಾಕಿಕೊಳ್ಳುವ ಬಳೆ

ಜಾಂಬವಂತ – ಕರಡಿ

## ಅಭ್ಯಾಸ

### ಅ. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

೧. ಕರಡಿಯನ್ನು ಕುಣಿಸುವವನ ವೇಷಭೂಷಣ ಹೇಗಿತ್ತು?

೨. ಕರಡಿಯು ಕಾಡಿನಲ್ಲಿ ಏನುಂಡು ಬೆಳೆದಿದೆ?

೩. ಕರಡಿಯು ಏನು ಮಾಡಿದರೆ ಧಣಿಯು ದಾನವನ್ನು ಕೊಡುತ್ತಾನೆ?

೪. ಕರಡಿಯು ಕೈಮುಗಿದು ಏನೆಂದು ಹಾರೈಸುತ್ತದೆ?

೫. ಕರಡಿಯ ಕುಣಿತಕ್ಕಿಂತ ಯಾರ ಬುದ್ಧಿಯ ಕುಣಿತ ಮಿಗಿಲಾದುದು?

## ಆ. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ, ಕಂಠಪಾಠ ಮಾಡಿರಿ.

೧. ಕಬ್ಬಿಣ ______________________

______________________

______________________

______________________ ನಿಂದಾನ!

೨. ಈ ಮನಷಾ ______________________

______________________

______________________

______________________ ನುಡಿದಾನ.

©KTBS NOT TO BE REPUBLISHED

## ವ್ಯಾಕರಣ ಮಾಹಿತಿ

### ಅ. ಪ್ರಕೃತಿಭಾವ.

ಕೆಲವು ಸಲ ಸ್ವರಕ್ಕೆ ಸ್ವರವು ಪರವಾದಾಗ ಯಾವುದೇ ರೀತಿಯ ಸಂಧಿ ಕಾರ್ಯವು ನಡೆಯುವುದಿಲ್ಲ. ಇದನ್ನು ಪ್ರಕೃತಿಭಾವ ಎನ್ನುತ್ತೇವೆ.

ಉದಾ: ಅಣ್ಣಾ + ಓಡಿ ಬಾ = ಅಣ್ಣಾ ಓಡಿ ಬಾ.

ಇಲ್ಲಿ 'ಅಣ್ಣಾ' ಮತ್ತು 'ಓಡಿ ಬಾ' ಎಂಬ ಎರಡು ಪದಗಳ ನಡುವೆ ಸಂಧಿಕಾರ್ಯ ನಡೆಯದೆ ಆ ಪದಗಳು ಹಾಗೆಯೇ ಉಳಿದುಕೊಂಡಿವೆ.

ಇದೇ ರೀತಿ ಕೆಲವು ಉದಾಹರಣೆಗಳನ್ನು ಗಮನಿಸಿರಿ.

ಕೃಷ್ಣ + ಎಲ್ಲಿದ್ದೀಯಾ = ಕೃಷ್ಣ ಎಲ್ಲಿದ್ದೀಯಾ?

ಅಕ್ಕಾ + ಎಲ್ಲಿರುವೆ = ಅಕ್ಕಾ ಎಲ್ಲಿರುವೆ?

ಆ + ಅಂಗಡಿ = ಆ ಅಂಗಡಿ

ಈ + ಮನೆ = ಈ ಮನೆ

## ಆ. ವಿರುದ್ಧಾರ್ಥಕ ಪದಗಳು.

ದಿನನಿತ್ಯ ಮಾತನಾಡುವಾಗ, ಬರೆಯುವಾಗ ಬಳಸುವ ಪದಗಳಲ್ಲಿ ವಿರುದ್ಧವಾದ ಅರ್ಥವಿರುವ ಕೆಲವು ಪದಗಳನ್ನು ಇಲ್ಲಿ ಕೊಡಲಾಗಿದೆ.

| ಪದ | | ವಿರುದ್ಧಾರ್ಥಕ ಪದ |
|---|---|---|
| ಅನುಭವ | x | ಅನನುಭವ |
| ಆದಿ | x | ಅನಾದಿ |
| ಉತ್ತಮ | x | ಅಧಮ |
| ಉನ್ನತಿ | x | ಅವನತಿ |
| ಗರ್ವಿ | x | ನಿಗರ್ವಿ |

## ಭಾಷಾಭ್ಯಾಸ

## ಅ. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

೧. ಈ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಿರಿ.
(ಶುದ್ಧ, ಅನುಕೂಲ, ಆರೋಗ್ಯ, ಸಫಲ)
**ಮಾದರಿ:** ಅವರಿಗೆ ತಂತ್ರಜ್ಞಾನದಲ್ಲಿ ಅನುಭವವಿದೆ.
ಅವರು ತಂತ್ರಜ್ಞಾನದಲ್ಲಿ ಅನನುಭವಿಗಳು.

೨. ಪ್ರಕೃತಿ ಭಾವ ಎಂದರೇನು?

೩. ಪ್ರಕೃತಿ ಭಾವಗಳನ್ನು ಹಾಗೂ ಸಂಧಿ ಪದಗಳನ್ನು ವಿಂಗಡಿಸಿ ಬರೆಯಿರಿ.

| | |
|---|---|
| ಓಹೋ, ನಿಧಿ ಸಿಕ್ಕಿತು! | ಅಣ್ಣಾ, ಅಲ್ಲಿ ನೋಡು. |
| ಅಡಿಗಲ್ಲು | ಆ ಅರಸು |
| ಹಳ್ಳಿಯಲ್ಲಿ | ಈ ಮನೆ |

NOT TO BE REPUBLISHED @KTBS

## ಇ. ಓದಿಗೆ ಮನ್ನಣೆ

೧. ವಿವಿಧ ಪ್ರಾಣಿಗಳನ್ನು ಆಡಿಸುವವರ ಜೀವನದ ಬಗೆಗೆ ಮಾಹಿತಿ ಸಂಗ್ರಹಿಸಿ.

೨. ಪ್ರಾಣಿಗಳ ಬಗೆಗಿನ ಹಾಡುಗಳನ್ನು ಸಂಗ್ರಹಿಸಿ ಹಾಡಿರಿ.

## ಈ. ಶುಭನುಡಿ

೧. ಪ್ರಾಣಿಗಳ ಸಂರಕ್ಷಣೆ ನಮ್ಮೆಲ್ಲರ ಹೊಣೆ.

೨. ಪ್ರಾಣಿಗಳನ್ನು ಹಿಂಸಿಸಬಾರದು.

★★★★★


# ೬. ಮಗುವಿನ ಮೊರೆ

– ಕಾವ್ಯಾನಂದ (ಸಿದ್ಧಯ್ಯ ಪುರಾಣಿಕ)

S7E6V8

**ಪ್ರವೇಶ :** ನಮ್ಮ ಬಾಳು 'ಆರಕ್ಕೆ ಏರಲಿಲ್ಲ ಮೂರಕ್ಕೆ ಇಳಿಯಲಿಲ್ಲ' ಎನ್ನುವಂತೆ ಆಗಬಾರದು. ಹುಟ್ಟಿದ ಮೇಲೆ ವ್ಯರ್ಥವಾಗಿ ಬದುಕದೆ ಏನಾದರೂ ಸಾಧಿಸಬೇಕು. ಆ ನಿಟ್ಟಿನಲ್ಲಿ ನಮ್ಮ ಪ್ರಯತ್ನ ಸದಾ ಇರಬೇಕು. ನಮ್ಮ ಇರುವಿಕೆಗೆ ಒಂದು ಗುರಿ ಇರಬೇಕು. ಆ ಗುರಿಯ ಕಡೆಗೆ ನಮ್ಮ ಪಯಣ ಸಾಗಬೇಕು. ನಮ್ಮ ಬದುಕಿಗೆ ಒಂದು ಅರ್ಥ ಬರಬೇಕು ಎಂಬುದೇ ಈ ಪದ್ಯದ ಆಶಯವಾಗಿದೆ.

ಉರಿಯಲಿಲ್ಲ ಆರಲಿಲ್ಲ
ಬಾಳ ಹಣತೆ ಹೇ ಪ್ರಭೋ!
ಬತ್ತಲಿಲ್ಲ ತುಂಬಲಿಲ್ಲ
ಬಾಳ ಒರತೆ ಹೇ ವಿಭೋ !
ಅರಳಲಿಲ್ಲ ಉರುಳಲಿಲ್ಲ
ಬಾಳ ಹೂವು ಹೇ ಪ್ರಭೋ !
ಮುಳುಗಲಿಲ್ಲ ತೇಲಲಿಲ್ಲ
ಬಾಳ ನಾವೆ ಹೇ ವಿಭೋ !
ಏಳಲೇಕೆ ಬೀಳಲೇಕೆ
ಬಾಳಲೇಕೆ ಈ ತೆರ ?
ಗೊಳಮೊಟ್ಟೆಯಿಟ್ಟು ಬಂತು
ಬಾಳ ಮರಿಗೆ ಬೇಸರ !
ಇರವಿಗೊಂದು ಗುರಿಯ ತೋರು
ಇದನೆ ಬೇಡಿಕೊಳ್ಳುವೆ !
ಬದುಕಿಗೊಂದು ಅರ್ಥ ತೋರು
ಅದನೆ ಹಾಡಿಕೊಳ್ಳುವೆ !



@KTBS NOT TO BE REPUBLISHED

**ಕೌಶಲ** : ಆಲಿಸುವುದು.

**ಸಾಮರ್ಥ್ಯ** : ಆಲಿಸಿದ ವಿಷಯವನ್ನು ಗ್ರಹಿಸಿ, ಹಾಗಾದರೆ, ಹಾಗಾಗದಿದ್ದರೆ? ಪ್ರಶ್ನೆಗಳಿಗೆ ಉತ್ತರಿಸುವುದು.

## ಕೃತಿಕಾರರ ಪರಿಚಯ



**ಸಿದ್ಧಯ್ಯ ಪುರಾಣಿಕ** ಅವರು **ಸಾ. ಶ. ೧೯೧೮ ರಲ್ಲಿ ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನ ದ್ಯಾಂಪುರ ಗ್ರಾಮದ**ಲ್ಲಿ ಜನಿಸಿದರು. ಇವರ ತಂದೆ ಪಂಡಿತ ಕಲ್ಲಿನಾಥ ಶಾಸ್ತ್ರಿ ಪುರಾಣಿಕ, ತಾಯಿ ದಾನಮ್ಮ ಪುರಾಣಿಕ. ಇವರು ಬಾಲ್ಯದಲ್ಲಿಯೇ ಸಾಹಿತ್ಯ ಮತ್ತು ಸಾಂಸ್ಕೃತಿಕ ವಾತಾವರಣವಿದ್ದ ಮನೆಯಲ್ಲಿ ಬೆಳೆದಿದ್ದರಿಂದ ಸಹಜವಾಗಿ ಸಾಹಿತ್ಯ ಕ್ಷೇತ್ರದಲ್ಲಿ ಉತ್ತಮವಾದ ಸೇವೆಯನ್ನು ಸಲ್ಲಿಸಲು ಸಾಧ್ಯವಾಯಿತು. **'ವಚನೋದ್ಯಾನದ ಅನುಭಾವಿ'** ಬಿರುದಾಂಕಿತರು. **'ಕಾವ್ಯಾನಂದ'** ಕಾವ್ಯನಾಮಾಂಕಿತರು. ಐ. ಎ. ಎಸ್. ಸ್ಥಾನಾಲಂಕೃತರು. ಇವರು **ಜಲಪಾತ, ಕರುಣಾ ಶ್ರಾವಣ, ಮಾನಸ ಸರೋವರ, ಮೊದಲು ಮಾನವನಾಗು, ವಚನೋದ್ಯಾನ** ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ ಕರ್ನಾಟಕ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಹಾಗೂ ಗುಲ್ಬರ್ಗಾದಲ್ಲಿ ನಡೆದ ೫೮ ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಗೌರವವು ಸಂದಿದೆ.

@KTBS NOT TO BE REPUBLISHED

## ಪದಗಳ ಅರ್ಥ

ಒರತೆ – ನೀರು ಜಿನುಗುವ ತಗ್ಗು

ತೆರ – ರೀತಿ

ನಾವೆ – ದೋಣಿ, ನೀರಿನ ಮೇಲೆ ಪ್ರಯಾಣ ಮಾಡಲು ಬಳಸುವ ಸಾಧನ

ವಿಭು – ದೇವರು, ಪರಮಾತ್ಮ, ಒಡೆಯ

ಹಣತೆ – ದೀಪ

## ಅಭ್ಯಾಸ

### ಅ. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

೧. ಯಾವುದು ಉರಿಯಲಿಲ್ಲ ಆರಲಿಲ್ಲ?

೨. ಯಾವುದು ಮುಳುಗಲಿಲ್ಲ ತೇಲಲಿಲ್ಲ?

೩. ಯಾವುದನ್ನು ನಾವು ದೇವರಲ್ಲಿ ಬೇಡಿಕೊಳ್ಳಬೇಕು?

೪. ನಾವು ಏನೆಂದು ಹಾಡಿಕೊಳ್ಳಬೇಕು?

೫. ಸಿದ್ಧಯ್ಯ ಪುರಾಣಿಕ ಅವರ ಕಾವ್ಯನಾಮ ಯಾವುದು?

## ಆ. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ, ಕಂಠಪಾಠ ಮಾಡಿರಿ.

೧. ಉರಿಯಲಿಲ್ಲ ________________
________________
________________
________________ ಹೇ ವಿಭೋ !

೨. ಇರವಿಗೊಂದು ________________
________________
________________
________________ ಹಾಡಿಕೊಳ್ಳುವೆ !

# ವ್ಯಾಕರಣ ಮಾಹಿತಿ

## ಅ. ಕ್ರಿಯಾಪದ

ಕರ್ತೃವಿನ ಕ್ರಿಯೆಯನ್ನು ಹೇಳುವ ಪದವೇ ಕ್ರಿಯಾಪದ. ಇದು ಕರ್ತೃವು ಮಾಡುವ ಕೆಲಸವನ್ನು ತಿಳಿಸುವುದರಿಂದ ವಾಕ್ಯದಲ್ಲಿ ಪ್ರಧಾನ ಪಾತ್ರ ವಹಿಸುತ್ತದೆ.

**ಉದಾ :** ರಾಮನು ನದಿಯಲ್ಲಿ ಈಜಿದನು.

ಇಲ್ಲಿ 'ಈಜು' ಪದವು ಕ್ರಿಯೆಯನ್ನು ಸೂಚಿಸುತ್ತದೆ.

## ಆ. ಕೆಳಗಿನ ವಾಕ್ಯಗಳಲ್ಲಿ ಕಂಡುಬರುವ ಕ್ರಿಯಾಪದಗಳನ್ನು ಓದಿ ತಿಳಿಯಿರಿ.

೧. ರೈತನು ಗದ್ದೆಯಲ್ಲಿ ದುಡಿಯುವನು.
೨. ರೈತನು ಭತ್ತವನ್ನು ಚೀಲದಲ್ಲಿ ತುಂಬುವನು.
೩. ಎತ್ತುಗಳು ಗದ್ದೆಯಲ್ಲಿ ನೇಗಿಲನ್ನು ಎಳೆಯುವುವು.

# ಭಾಷಾಭ್ಯಾಸ

## ಅ. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

೧. ಕ್ರಿಯಾಪದ ಎಂದರೇನು? ಉದಾಹರಣೆಯೊಂದಿಗೆ ವಿವರಿಸಿರಿ.
೨. ತಿನ್ನು, ಓದು, ಆಡು– ಈ ಪದಗಳನ್ನು ಮಾದರಿಯಂತೆ ಬರೆಯಿರಿ.
ಮಾದರಿ : ಕುಣಿ – ಕುಣಿಯುತ್ತಾನೆ – ಕುಣಿದನು.

## ಆ. ಓದಿಗೆ ಮನ್ನಣೆ

೧. ಈ ಪದ್ಯವನ್ನು ಸಾಮೂಹಿಕವಾಗಿ ಹಾಡಿರಿ.
೨. ಈ ಪದ್ಯವನ್ನು ಅಭಿನಯದೊಂದಿಗೆ ರಾಗಬದ್ಧವಾಗಿ ಹಾಡಿರಿ.

## ಇ. ಶುಭನುಡಿ

೧. ಕಾಯಕವೇ ಕೈಲಾಸ.
೨. ದುಡಿಮೆಯೇ ಜೀವನದ ಬಹುಮುಖ್ಯ ಗುರಿ.

★★★★★

NOT TO BE REPUBLISHED @KTBS

# ೭. ಮೂಡಲ ಮನೆ

D5W6X3

– ಚಂದ್ರಶೇಖರ ಕಂಬಾರ

**ಪ್ರವೇಶ :** ನಾವು ವಿವಿಧ ಜಾತಿಗಳಿಂದ ವಿವಿಧ ಮತಗಳಿಂದ ಬಂದಿರಬಹುದು. ಆದರೆ ಒಂದೇ ದೇಶದಲ್ಲಿ ಬಾಳಿ ಬದುಕುತ್ತೇವೆ. ಹಬ್ಬ ಹರಿದಿನಗಳನ್ನು ಆಚರಿಸುತ್ತಾ ಮೇಲು-ಕೀಳುಗಳನ್ನು ಮರೆಯುತ್ತಾ ಭಾರತಮಾತೆಯೆಂಬ ಒಂದೇ ತಾಯಿ ಮರದ ವಿಶಾಲ ಬಾಹುಗಳಡಿಯಲ್ಲಿ ಜೀವಿಸಬೇಕಾದ ಸತ್ಯವನ್ನು, ಅಗತ್ಯವನ್ನು ಪ್ರಸ್ತುತ ಕವನದಲ್ಲಿ ಕಂಡುಕೊಳ್ಳುತ್ತೇವೆ.



ನಮ್ಮೂರ ಅಗಸ್ಯಾಗ ಆಲದ ಮರ ಬೆಳೆದು
ಹಾದಿ ಬೀದೆಲ್ಲಾ ತಂಪು ನೆರಳ।
ನೆತ್ತಿಗೂದಲ ಹರವಿ ತಪವ ಮಾಡೋನ್ಯಾರ।
ಜಡಿಮುನಿಯ ಜಡಿಯ ಹಾಂಗ ಬಿಳಲ॥
ರೆಂಬಿ ಕೊಂಬಿಯ ಮ್ಯಾಲ ಗೂಡ ಕಟ್ಟಿದಾವ
ರೆಕ್ಕೆ ಬಲಿತ ಹಕ್ಕಿ
ಗೂಡಿನಾಗ । ಮಲಗ್ಯಾವ ಮರಿಹಕ್ಕಿ ॥
ದೂರ ದೇಶದ ವಲಸಿಗ ಹಕ್ಕಿಗು
ಐತಿ ಜಾಗ ಒಳಗ ।
ಬನ್ನಿರಿ । ನೀವು ನಮ್ಮ ಬಳಗ ॥


NOT TO BE REPUBLISHED

ಹಳೆಯ ಬಾವಿಯ ತಳದ ನೀರಿನಾಗ
ಹಸರು ಚಿಗರತಾವ ।
ಬೇರಿಗೆ ಮೊಳಿಕಿ ಒಡಿಯತಾವ ॥
ಭೂತ ಬೇತಾಳ ಜೋತ ಬಾವಲಿ
ಮ್ಯಾಲ ಕೂಗತಾವ ।
ಮರದಾಗ ॥ ಕರಗ ಕುಣಿಯತಾವ ॥
ಮರದ ಎಲೆ ನೆರಳು ಮನೆಯ ಗೋಡೆ ಮ್ಯಾಲ
ಆಡತಾವ ಆಟ
ಮೂಡ್ಯಾವ । ತೊಗಲ ಗೊಂಬಿಯಾಟ
ಕರುಳ ಬಳ್ಳಿಯ ಕತೆಯ ಹೇಳತಾವ
ನೋಡ್ರಿ ಶಾಂತ ಚಿತ್ತ ।
ನಾವೂನು ಅದರ ಭಾಗ ಮಾತ್ರ ॥

| | | |
|---|---|---|
| **ಕೌಶಲ** | : | ಮಾತನಾಡುವುದು. |
| **ಸಾಮರ್ಥ್ಯ** | : | ಸನ್ನಿವೇಶಕ್ಕೆ ತಕ್ಕಂತೆ ಆಡುಭಾಷೆ ಮತ್ತು ಗ್ರಾಂಥಿಕ ಭಾಷೆಯನ್ನು ಬಳಸುವುದು. |

NOT TO BE REPUBLISHED @KTBS

## ಕೃತಿಕಾರರ ಪರಿಚಯ



**ಡಾ. ಚಂದ್ರಶೇಖರ ಕಂಬಾರರು** ದಿನಾಂಕ **೦೨-೦೧-೧೯೩೭ರಲ್ಲಿ ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲೂಕಿನ ಘೋಡಗೆರೆ** ಗ್ರಾಮದಲ್ಲಿ ಜನಿಸಿದರು. ಪ್ರಸಿದ್ಧ ಜಾನಪದ ವಿದ್ವಾಂಸರಾದ ಡಾ. ಕಂಬಾರರು **೨೫ ನಾಟಕಗಳು, ೧೦ ಕವನ ಸಂಕಲನಗಳು, ೫ ಕಾದಂಬರಿಗಳು ಮತ್ತು ಹಲವು** ಕೃತಿಗಳನ್ನು ರಚಿಸಿದ್ದಾರೆ. **'ಚಕೋರಿ'** ಅವರ ಮಹಾಕಾವ್ಯ. **ಸಂಗ್ಯಾಬಾಳ್ಯಾ, ಜೋಕುಮಾರಸ್ವಾಮಿ, ಸಿರಿಸಂಪಿಗೆ, ಶಿವರಾತ್ರಿ** ಮುಂತಾದವು ನಾಟಕಗಳು, **ಕರಿಮಾಯಿ, ಸಿಂಗಾರವ್ವ ಮತ್ತು ಅರಮನೆ, ಶಿಖರಸೂರ್ಯ** ಮುಂತಾದವು ಕಾದಂಬರಿಗಳು.

ಶ್ರೀಯುತರು ೨೦೧೧ರ ಜ್ಞಾನಪೀಠ ಪ್ರಶಸ್ತಿಯನ್ನು ಪಡೆದಿದ್ದಾರೆ. **ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕೇಂದ್ರ ಸಂಗೀತ ಮತ್ತು ನಾಟಕ ಅಕಾಡೆಮಿ ಪ್ರಶಸ್ತಿ** ಮುಂತಾದ ಹಲವಾರು ಪ್ರಶಸ್ತಿಗಳು ಶ್ರೀಯುತರಿಗೆ ಲಭಿಸಿವೆ. ಪ್ರಸ್ತುತ **'ಮೂಡಲಮನೆ'** ಕವನವನ್ನು ಅವರ **'ಎಲ್ಲಿದೆ ಶಿವಾಪುರ'** ಎಂಬ ಕವನ ಸಂಕಲನದಿಂದ ಆಯ್ದುಕೊಳ್ಳಲಾಗಿದೆ.

## ಪದಗಳ ಅರ್ಥ

ಅಗಸಿ – ಊರಿನ ಪ್ರವೇಶದ್ವಾರ, ಊರ ಹೆಬ್ಬಾಗಿಲು

ಐತಿ – ಇದೆ, ಇರುವುದು

ಕರಗ – ಒಂದು ಉತ್ಸವದ ಹೆಸರು. ತಲೆಯ ಮೇಲೆ ಕಲಶ ಹೊತ್ತುಕೊಂಡ ಕುಣಿಯುವ ಒಂದು ನೃತ್ಯ

ಕರುಳಬಳ್ಳಿ – ಸಂಬಂಧವನ್ನು ಕುರಿತು ಹೇಳುವಾಗ ಬಳಸುವ ಪದ

ಗೂಡಿನ್ಯಾಗ – ಗೂಡಿನಲ್ಲಿ, ಗೂಡಿನೊಳಗೆ

ಜಡಿ – ಜಡೆ, ಉದ್ದವಾದ ಕೂದಲ ರಾಶಿ, ಜಟೆ

ಜಡಿಮುನಿ – ವಿಶೇಷವಾಗಿ ಜಡೆಯನ್ನು ಬೆಳೆಸಿದ ಸನ್ಯಾಸಿ

ಜೋತ ಬಾವಲಿ – ರಾತ್ರಿಯ ಹೊತ್ತು ಸಂಚರಿಸುವ, ಮರದ ರೆಂಬೆಗಳಲ್ಲಿ ನೇತಾಡುವ, ಹಾರುವ ಒಂದು ಪ್ರಾಣಿ

ತಪ – ತಪಸ್ಸು, ಧ್ಯಾನ

ತಳ – ಕೆಳಭಾಗ, ಸಮತಟ್ಟಾದ ಪ್ರದೇಶ

ತೊಗಲುಗೊಂಬೆಯಾಟ – ಚರ್ಮ ಬಳಸಿ ಸಿದ್ಧಪಡಿಸಿದ ಗೊಂಬೆಗಳನ್ನು ಬಳಸಿ ಆಡುವ ಆಟ

ನಾವೂನು – ನಾವೂ ಸಹ, ನಾವೆಲ್ಲರೂ

ನೆತ್ತಿ – ತಲೆಯ ಮಧ್ಯಭಾಗ

ಮ್ಯಾಲ – ಮೇಲೆ

ಮೊಳಕೆ ಒಡಿ – ಮೊಳಕೆ ಬರುವುದು, ಚಿಗುರುವುದು

ಬಲಿತ – ಬೆಳೆದ, ಶಕ್ತಿಯುತವಾದ, ಬಲಿಷ್ಠ

ಬಳಗ – ಗುಂಪು, ಬಂಧುಗಳ ಸಮೂಹ

ಬಿಳಲ – ಬಿಳಲು, ಮರದ ಕೊಂಬೆಗಳಿಂದ ನೇತಾಡುವ ಬಿಳಲು

ಭಾಗ – ಅಂಶ, ಒಂದು ಪಾಲು

ಭೂತ ಬೇತಾಳ – ದೆವ್ವ, ಪಿಶಾಚಿ

ವಲಸಿಗ – ಒಂದು ಪ್ರದೇಶದಿಂದ ಮತ್ತೊಂದು ಕಡೆಗೆ ಹೋಗಿ ನೆಲೆಸುವವನು

ಶಾಂತಚಿತ್ತ – ಶಾಂತಮನಸ್ಸು, ತೃಪ್ತ ಮನಸ್ಸು

ಹರವು – ಹರಡು, ವಿಸ್ತರಿಸು, ಕೆದರು

ಹಸರ – ಹಸಿರು

NOT TO BE REPUBLISHED @KTBS

## ಅಭ್ಯಾಸ

**ಅ. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

೧. ಆಲದ ಮರ ಎಲ್ಲಿ ಬೆಳೆದು ನಿಂತಿದೆ?

೨. ರೆಂಬೆ ಕೊಂಬೆಯ ಮೇಲೆ ಯಾರು ಗೂಡು ಕಟ್ಟಿದ್ದಾರೆ?

೩. ಬನ್ನಿರಿ, ನೀವು ನಮ್ಮ ಬಳಗ ಎಂದು ಕವಿ ಯಾರಿಗೆ ಹೇಳುತ್ತಿದ್ದಾರೆ?

೪. ಮರದಲ್ಲಿ ಯಾರೆಲ್ಲಾ ಸೇರಿ ಕರಗ ಕುಣಿಯುತ್ತಾರೆ?

೫. ಮರದ ಎಲೆಗಳ ನೆರಳಾಟ ಎಲ್ಲಿ ನಡೆಯುತ್ತಿದೆ?

೬. ಕವಿ ಇಲ್ಲಿ ದೇಶವನ್ನು ಯಾವುದಕ್ಕೆ ಹೋಲಿಸಿದ್ದಾರೆ?

**ಆ. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ, ಕಂಠಪಾಠ ಮಾಡಿರಿ.**

@KTBS
NOT TO BE REPUBLISHED

೧. ನಮ್ಮೂರ ______________________

______________________

______________________

______________________ ಹಾಂಗ ಬೆಳಲ॥

೨. ಮೂಡ್ಯಾವ । ______________________

______________________

______________________

______________________ ಭಾಗ ಮಾತ್ರ ॥

## ವ್ಯಾಕರಣ ಮಾಹಿತಿ

### ಅ. ಕಾಲಗಳು

ನಡೆದ, ನಡೆಯುತ್ತಿರುವ ಮತ್ತು ನಡೆಯುವ ಕ್ರಿಯೆಗಳನ್ನು ಸೂಚಿಸುವುದೇ ಕಾಲಗಳು.

ಇವುಗಳಲ್ಲಿ ಮೂರು ವಿಧ : ೧) ಭೂತಕಾಲ

೨) ವರ್ತಮಾನಕಾಲ

೩) ಭವಿಷ್ಯತ್‌ಕಾಲ

**೧) ಭೂತಕಾಲ (ನಡೆದ)**

ಮಹೇಂದ್ರನು ಮನೆಗೆಲಸವನ್ನು <u>ಮಾಡಿದನು.</u>

ರಾಣಿ ಮಾರುಕಟ್ಟೆಗೆ <u>ಹೋದಳು.</u>

ಗುರುಗಳು ಪಾಠವನ್ನು <u>ಹೇಳಿದರು.</u>

**೨) ವರ್ತಮಾನಕಾಲ (ನಡೆಯುತ್ತಿರುವ)**

ರಾಜು ತೋಟದಲ್ಲಿ ಕೆಲಸ <u>ಮಾಡುತ್ತಾನೆ.</u>

ಲಕ್ಷ್ಮಿ ಶಾಲೆಗೆ <u>ಹೋಗುತ್ತಾಳೆ.</u>

ಅವರು ಜಮೀನಿನಲ್ಲಿ <u>ದುಡಿಯುತ್ತಾರೆ.</u>

**೩) ಭವಿಷ್ಯತ್‌ಕಾಲ (ನಡೆಯುವ)**

ಪ್ರಸಾದ್ ಶಿಕ್ಷಕ <u>ಆಗುವನು.</u>

ಶಾಲಿನಿ ನಟಿ <u>ಆಗುವಳು.</u>

ವೈದ್ಯರು ನಮ್ಮ ಮನೆಗೆ <u>ಬರುವರು.</u>

**ಕೆಳಗಿನ ಕೋಷ್ಟಕವನ್ನು ಗಮನಿಸಿ ಓದಿರಿ.**

**ಕಾಲಗಳು**

| ಭೂತಕಾಲ | ವರ್ತಮಾನಕಾಲ | ಭವಿಷ್ಯತ್‌ಕಾಲ |
|---|---|---|
| ಆಡಿದೆನು | ಆಡುತ್ತೇನೆ | ಆಡುವೆನು |
| ನೋಡಿದೆನು | ನೋಡುತ್ತೇನೆ | ನೋಡುವೆನು |
| ಬೇಡಿದಳು | ಬೇಡುತ್ತಾಳೆ | ಬೇಡುವಳು |
| ಓಡಿದನು | ಓಡುತ್ತಾನೆ | ಓಡುವನು |
| ನಡೆಯಿತು | ನಡೆಯುತ್ತದೆ | ನಡೆಯುವುದು |

@KTBS
NOT TO BE REPUBLISHED

## ಭಾಷಾಭ್ಯಾಸ

### ಅ. ಈ ವಾಕ್ಯಗಳಲ್ಲಿ ಅಡಿ ಗೆರೆ ಎಳೆದ ಶಬ್ದ ಯಾವ ಕಾಲವನ್ನು ಸೂಚಿಸುತ್ತದೆ ಬರೆಯಿರಿ.

೧. ಅರ್ಚನ ಗೆಳತಿಯ ಮನೆಗೆ ಹೋಗುವಳು. [ ]

೨. ಚಂದನ ಚೆಂಡಾಟ ಆಡುತ್ತಾನೆ. [ ]

೩. ಧನುಶ್ರೀ ಗೀತೆ ಹಾಡಿದಳು. [ ]

### ಆ. ಮಾದರಿಯಂತೆ ಸರಿಯಾದ ಶಬ್ದ ಬರೆಯಿರಿ.

**ಮಾದರಿ:** ರಾಜ್ಯವನ್ನು ಆಳುವವಳು. [ ರಾಣಿ ]

೧. ಹಣ, ವಸ್ತುಗಳನ್ನು ಉಚಿತವಾಗಿ ನೀಡುವವ. [ ]

೨. ಸೇನೆಯನ್ನು ಮುನ್ನಡೆಸುವವ. [ ]

೩. ಕಾಯಿಲೆಯಿಂದ ಹಾಸಿಗೆಯಲ್ಲಿ ಮಲಗಿದವ. [ ]

### ಇ. ಓದಿಗೆ ಮನ್ನಣೆ

೧. ಚಂದ್ರಶೇಖರ ಕಂಬಾರರ 'ಕಿಟ್ಟಿ ಕತೆ' ನಾಟಕವನ್ನು ಸಂಪಾದಿಸಿ ಓದಿರಿ.

೨. ದೇಶದ ಬಗ್ಗೆ ದಿನಕರ ದೇಸಾಯಿಯವರ ಚೌಪದಿಗಳನ್ನು ಓದಿಸಿ.

೩. ವಿವಿಧ ದೇಶಭಕ್ತಿ ಗೀತೆಗಳನ್ನು ಸಂಗ್ರಹಿಸಿ ಗುಂಪಿನಲ್ಲಿ ಹಾಡಿರಿ.

### ಈ. ಶುಭನುಡಿ

೧. ಜೀವನ ಬಲು ಚಿಕ್ಕದು. ಅದನ್ನು ಆದಷ್ಟು ಚೊಕ್ಕವಾಗಿ ಕಳೆಯೋಣ.

೨. ನಿನ್ನ ದೇಶಕ್ಕಾಗಿ ನೀನು ಯಾವ ತ್ಯಾಗಕ್ಕಾದರೂ ಸಿದ್ಧನಾಗು.

★★★★★

©KTBS NOT TO BE REPUBLISHED

# ೮. ಭುವನೇಶ್ವರಿ

– ಬಿ.ವಿ. ಸತ್ಯನಾರಾಯಣರಾವ್

M2K6B2

**ಪ್ರವೇಶ :** ಕನ್ನಡ ನಾಡು ಮತ್ತು ನುಡಿಯ ಬಗ್ಗೆ ಎಳೆಯರಲ್ಲಿ ಪ್ರೀತಿ ಮತ್ತು ಅಭಿಮಾನವನ್ನು ಮೂಡಿಸುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ. ನಮ್ಮ ನಾಡಿನ ಇತಿಹಾಸ, ಆಳಿದ ಪರಾಕ್ರಮಿಗಳು, ನಾಡನ್ನು ಕಟ್ಟಲು ಶ್ರಮಿಸಿದ ನೇತಾರರು, ಇಲ್ಲಿನ ಶಿಲ್ಪಕಲೆ, ಸಂಸ್ಕೃತಿ ಮುಂತಾದ ಪರಂಪರೆಯನ್ನು, ಅದರ ಶ್ರೀಮಂತಿಕೆಯನ್ನು ಮಕ್ಕಳಿಗೆ ಅರ್ಥಮಾಡಿಸುವ ಮೂಲಕ, ಅವರೆಲ್ಲರಲ್ಲೂ ನಾವು ಎಂತಹ ಪರಂಪರೆಯ ವಾರಸುದಾರರಾಗಿದ್ದೇವೆಂಬ ಬಗ್ಗೆ ಹೆಮ್ಮೆ ಮೂಡಿಸುವ ಆಶಯವನ್ನು ಪ್ರಸ್ತುತ ಪದ್ಯವು ಒಳಗೊಂಡಿದೆ.



ಭುವನೇಶ್ವರಿ ಪದ ಪೂಜಿಸಿ ಹೇಳುವೆ ಸಿರಿಗನ್ನಡ ವರ ಚರಿತೆಯನು ।
ಕನ್ನಡ ನಾಡಿನ ಹೆಮ್ಮೆಯ ಮಕ್ಕಳೆ ಕೇಳಿರಿ ನಾಡಿನ ಸೊಬಗನ್ನು ॥೧॥

ಗೆದ್ದು ಪಲ್ಲವರ ಕದಂಬಮಯೂರ ಮೆರೆದನು ವರಬನವಾಸಿಯಲಿ ।
ತದನಂತರ ಚಾಲುಕ್ಯರ ಆಳ್ವಿಕೆ ವೀರತಾಣ ಬಾದಾಮಿಯಲಿ ॥೨॥

ನಾಡಿನ ಹೆಮ್ಮೆಯು ಗಂಗ ಮನೆತನ ರಾಷ್ಟ್ರಕೂಟ ಹೊಯ್ಸಳ ಹಿರಿಮೆ ।
ವಿಜಯನಗರಸಿರಿ ಕೆಳದಿಯ ವೈಭವ ಕನ್ನಡಮಾತೆಯ ನಿಜಗರಿಮೆ ॥೩॥

ಹೊಯ್ಸಳ ಪತನದ ನಂತರ ಬೆಳೆಯಿತು ವಿಜಯನಗರವತಿ ಶೀಘ್ರದಲಿ ।
ಲೋಕವೆ ಬೆರಗಾಗುವ ಸಿರಿಸಂಪದ ಮೆರೆಯಿತು ಈ ಸಾಮ್ರಾಜ್ಯದಲಿ ॥೪॥

ಯುದ್ಧದಿ ಆಂಗ್ಲರನೆದುರಿಸಿ ಗೆದ್ದಳು ಚನ್ನಮ್ಮನು ಕಿತ್ತೂರಿನಲಿ ।
ದ್ರೋಹಕೆ ಸೆರೆಯಾಗುತ ದಿನವನು ದೂಡಿದಳವಳು ಜೈಲಿನಲಿ ॥೫॥

ರಾಜರ ಅಂತಃಕಲಹದಿ ಬಿಳಿಯರು ಭಾರತವನ್ನೇ ನುಂಗಿದರು ।
ಮೈಸೂರಿನ ಹುಲಿ ಟೀಪುವ ಸೋಲಿಸಿ ರಂಗಪಟ್ಟಣವನಮರಿದರು ॥೬॥

ಸ್ವತಂತ್ರ ಭಾರತ ಚಳುವಳಿ ದೇಶದಿ ಬೆಳೆಯಿತು ಗಾಂಧೀ ತತ್ವದಲಿ ।
ಸ್ವದೇಶಿ ಚಳುವಳಿ ಅಸಹಕಾರಗಳು ಮೊಳೆತವು ಹಿರಿಯರ ಮಾರ್ಗದಲಿ ॥೭॥

ನಲವತ್ತೇಳರ ಆಗಸ್ಟಿನಲಿ ಹದಿನಾಲ್ಕರ ನಡುರಾತ್ರಿಯಲಿ ।
ಹಾರಿತು ಸ್ವತಂತ್ರ ಭಾರತಬಾವುಟ ಹೆಮ್ಮೆಯ ಭಾರತ ದೇಶದಲಿ ॥೮॥

ಐವತ್ತಾರರ ನವೆಂಬರೊಂದು–ವಿಶಾಲ ಮೈಸೂರಿನ ಉದಯ ।
ಭಾವನೆ ತುಂಬಲು ಎಪ್ಪತ್ಮೂರರಲಿ ಕರ್ನಾಟಕವಾಗಿಹ ಪರಿಯ ॥೯॥

ಹಿಂದೂ ಮುಸ್ಲಿಂ ಕ್ರೈಸ್ತ ಜೈನ ಬಸವೇಶ್ವರರ ಸಿರಿಪಂಥವಿದೆ ।
ಕೊಂಕಣಿ ಉರ್ದು ತುಳುವಿನ ಸಂಸ್ಕೃತಿ ಕನ್ನಡತನಜಲ ಚಿಮ್ಮುತಿದೆ ॥೧೦॥

"ಕನ್ನಡಗೆಲ್ಲಲಿ ಕನ್ನಡಬಾಳಲಿ" ನಮ್ಮೀ ಕನ್ನಡ ನೆಲದಲ್ಲಿ ।
"ಕನ್ನಡ ಕಲಿಯಿರಿ ಕನ್ನಡ ಪೋಷಿಸಿ" ನಮ್ಮಯ ಕನ್ನಡನಾಡಿನಲಿ ॥೧೧॥

**ಕೌಶಲ** : ಮಾತನಾಡಿ ಚರ್ಚಿಸುವುದು.

**ಸಾಮರ್ಥ್ಯ** : ಪದ್ಯದ ವಿವರ – ಘಟನೆಗಳನ್ನು ವಿವರಿಸುವುದು.

© KTBS NOT TO BE REPUBLISHED

## ಕೃತಿಕಾರರ ಪರಿಚಯ



**ಸತ್ಯವಿಠಲ** ಅಂಕಿತದಿಂದ ಪ್ರಸಿದ್ಧರಾಗಿರುವ **ಬಿ. ವಿ. ಸತ್ಯನಾರಾಯಣರಾವ್** ಅವರು **(೧೯೪೮) ತುಮಕೂರು ಜಿಲ್ಲೆ ಶಿರಾ ತಾಲೂಕಿನ ಬುಕ್ಕಾಪಟ್ಟಣ**ದವರು. ಮೆಕಾನಿಕಲ್ ಇಂಜಿನಿಯರಿಂಗ್ ಪದವೀಧರರಾದ ಇವರು ಪ್ರಕೃತ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದಲ್ಲಿ ಉಪಪ್ರಧಾನ ವ್ಯವಸ್ಥಾಪಕರಾಗಿ ಕಾರ್ಯ ನಿರ್ವಹಿಸಿ ನಿವೃತ್ತರಾಗಿರುವರು. **ಗೀತ, ಸ್ತೋತ್ರ, ಕಾವ್ಯ, ಲಾವಣಿ, ಗದ್ಯ** ಹೀಗೆ ವಿವಿಧ ಪ್ರಕಾರಗಳಲ್ಲಿ **ಅರವತ್ತು ಕೃತಿಗಳ**ನ್ನು ರಚಿಸಿದ್ದಾರೆ. **ಹನ್ನೊಂದು ಭಾಮಿನಿ ಕಾವ್ಯಗಳನ್ನೂ ಬಸವ ಭಾರತಿ** ಸುದೀರ್ಘ ಲಾವಣಿ ಕಾವ್ಯವನ್ನೂ **ಸಂಪೂರ್ಣ ದೇವೀ ಮಹಾತ್ಮೆ, ಬಸವೇಶ್ವರ ಲೀಲಾ ವೈಭವಂ, ಲಂಕೇಶ್ವರ ಸೋಮನಾಥ ಚಾರಿತ್ರ** ಮುಂತಾದ ಕಾವ್ಯಗಳನ್ನೂ ರಚಿಸಿದ್ದಾರೆ. ಕನ್ನಡ - ಸಂಸ್ಕೃತ ಭಾಷೆಗಳೆರಡರಲ್ಲೂ ಪಾಂಡಿತ್ಯವುಳ್ಳವರು. **ಬಾಹುಬಲಿಚರಿತಂ, ಗಾಯತ್ರೀರಾಮಾಯಣ, ಸಿರಿಗನ್ನಡ ವೈಜಂತಿ, ಕನ್ನಡನಾಡಚರಿತ್ರೆ, ತತ್ವಭಾರತಿ, ಭಾವಗೀತಗಳು, ಶ್ರೀಶಿವಕುಮಾರಸ್ವಾಮಿಗುರುಚರಿತಂ, ಗುರುದತ್ತಚರಿತಂ** ಇವರ ಪ್ರಮುಖ ಕೃತಿಗಳು ನೃತ್ಯರೂಪಕ ಹಾಗೂ ನಾಮಾವಳಿಗಳನ್ನು ರಚಿಸಿದ್ದಾರೆ.

## ಪದಗಳ ಅರ್ಥ

| | | |
|---|---|---|
| ಪದ | – | ಪಾದ, ಕಾಲುಗಳು |
| ಚರಿತೆ | – | ಇತಿಹಾಸ |
| ಸೊಬಗು | – | ಚೆಲುವು, ಅಂದ |
| ಮೆರೆ | – | ಖ್ಯಾತಿಹೊಂದು |
| ವೀರತಾಣ | – | ವೀರರ ಸ್ಥಳ |
| ಹಿರಿಮೆ | – | ಹೆಚ್ಚುಗಾರಿಕೆ, |
| ಸಿರಿ | – | ಶ್ರೀ, ಸಂಪತ್ತು, ಚೆಲುವು |
| ವೈಭವ | – | ಐಶ್ವರ್ಯ, ಡೌಲು |
| ಗರಿಮೆ | – | ಹಿರಿಮೆ |
| ಪತನ | – | ಅವನತಿ, ನಾಶ |
| ಶೀಘ್ರದಲಿ | – | ಬೇಗನೆ, ಅಲ್ಪಸಮಯದಲ್ಲೇ |
| ಬೆರಗಾಗು | – | ವಿಸ್ಮಯಪಡು |
| ಸಿರಿ ಸಂಪದ | – | ಸಂಪತ್ತು |
| ದ್ರೋಹ | – | ಕೇಡನ್ನೆಣಿಸು, ವಿಶ್ವಾಸಘಾತ |

@KTBS NOT TO BE REPUBLISHED

| | | |
|---|---|---|
| ಸೆರೆ | – | ಬಂಧನ |
| ಅಂತಃಕಲಹ | – | ಒಳಜಗಳ |
| ಅಮರಿದರು | – | ಆಕ್ರಮಿಸು |
| ಚಳುವಳಿ | – | ಹೋರಾಟ |
| ತತ್ತ್ವ | – | ಸಿದ್ಧಾಂತ, ಸಾರಸತ್ವ |
| ಅಸಹಕಾರ | – | ಸಹಕರಿಸದಿರುವುದು |
| ಮೊಳೆತವು | – | ಚಿಗುರಿದವು |
| ವಿಶಾಲ | – | ವಿಸ್ತಾರವಾದ |
| ಉದಯ | – | ಮೂಡು, ಹುಟ್ಟು |
| ಪರಿ | – | ರೀತಿ |
| ಪಂಥ | – | ಮಾರ್ಗ, ಸಂಪ್ರದಾಯ |
| ಚಿಮ್ಮು | – | ನೆಗೆ, ಬೀಸು |
| ಪೋಷಿಸು | – | ಕಾಪಾಡು, ಮೊರೆ |

## ಅಭ್ಯಾಸ

### ಅ. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

೧. ಪಲ್ಲವರನ್ನು ಗೆದ್ದು ಮೆರೆದವರು ಯಾರು?
೨. ಬಾದಾಮಿಯಲ್ಲಿ ಆಳ್ವಿಕೆ ನಡೆಸಿದವರಾರು?
೩. ಯಾರ ಪತನದ ನಂತರ ವಿಜಯನಗರ ಬೆಳೆಯಿತು?
೪. ಯುದ್ಧದಲ್ಲಿ ಆಂಗ್ಲರನ್ನು ಎದುರಿಸಿ ಗೆದ್ದವರು ಯಾರು?
೫. ಭಾರತ ಸ್ವಾತಂತ್ರ್ಯದ ಚಳವಳಿ ಯಾರ ತತ್ವದಲ್ಲಿ ಬೆಳೆಯಿತು?
೬. ವಿಶಾಲ ಮೈಸೂರಿನ ಉದಯವಾದುದು ಯಾವಾಗ?
೭. ನಮ್ಮ ನಾಡಿನಲ್ಲಿ ಯಾವುದು ಗೆಲ್ಲಬೇಕು? ಯಾವುದು ಬಾಳಬೇಕು?

### ಆ. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ, ಕಂಠಪಾಠ ಮಾಡಿರಿ.

೧. ಹೊಯ್ಸಳ ಪತನದ ________________
________________ ಸಾಮ್ರಾಜ್ಯದಲಿ

೨. ಯುದ್ಧದಿ ________________
________________ ಜೈಲಿನಲಿ

©KTBS NOT TO BE REPUBLISHED

೩. ಹಿಂದೂ ಮುಸ್ಲಿಂ ______________________

______________________ ಚಿಮ್ಮುತಿದೆ

೪. "ಕನ್ನಡಗೆಲ್ಲಲಿ ______________________

______________________ ನಮ್ಮಯ ಕನ್ನಡನಾಡಿನಲಿ

## ವ್ಯಾಕರಣ ಮಾಹಿತಿ

ಹಿಂದಿನ ಅಧ್ಯಾಯಗಳಲ್ಲಿ ಕ್ರಿಯಾಪದದ ರೂಪಗಳನ್ನು ಪರಿಚಯಿಸಿಕೊಂಡಿದ್ದೇವಲ್ಲವೆ? ಕ್ರಿಯಾಪದದ ಮೂಲ ರೂಪವನ್ನು 'ಕ್ರಿಯಾಪ್ರಕೃತಿ' ಅಥವಾ 'ಧಾತು' ಎಂದು ಕರೆಯುತ್ತೇವೆ. ಉದಾಹರಣೆಗೆ : ತಿನ್ನುತ್ತಾನೆ, ತಿನ್ನುತ್ತಾಳೆ, ತಿನ್ನುತ್ತದೆ, ತಿನ್ನುವರು, ತಿನ್ನಲಿ, ತಿಂದರು, ತಿಂದಿತು ಮುಂತಾದ ಕ್ರಿಯಾಪದಗಳ ಮೂಲರೂಪವು 'ತಿನ್ನು' ಎಂಬುದಾಗಿದೆ.

ಇದೇ ರೀತಿಯಲ್ಲಿ ನಾವು ಭೂತಕಾಲ, ವರ್ತಮಾನಕಾಲ ಹಾಗೂ ಭವಿಷ್ಯತ್ ಕಾಲಗಳನ್ನು ಪರಿಚಯಿಸಿಕೊಂಡಿದ್ದೇವೆ. ಈ ಮೇಲಿನ 'ತಿನ್ನು' ಎಂಬ ಧಾತುವು ಭೂತ, ವರ್ತಮಾನ ಮತ್ತು ಭವಿಷ್ಯತ್ ಕಾಲಗಳ ಕ್ರಿಯಾಪದ ರೂಪ ಪಡೆದಿರುವುದನ್ನು ಈ ಕೆಳಗಿನ ಪಟ್ಟಿಯಿಂದ ಅರ್ಥಮಾಡಿಕೊಳ್ಳಿರಿ.

©KTBS NOT TO BE REPUBLISHED

### 'ತಿನ್ನು' ಧಾತು

| | ವರ್ತಮಾನಕಾಲ | | ಭೂತಕಾಲ | | ಭವಿಷ್ಯತ್‌ಕಾಲ | |
|---|---|---|---|---|---|---|
| | ಏಕವಚನ | ಬಹುವಚನ | ಏಕವಚನ | ಬಹುವಚನ | ಏಕವಚನ | ಬಹುವಚನ |
| ಪ್ರಥಮ ಪುರುಷ | ಅವನು–ತಿನ್ನುತ್ತಾನೆ | ತಿನ್ನುತ್ತಾರೆ | ತಿಂದನು | ತಿಂದರು | ತಿನ್ನುವನು | ತಿನ್ನುವರು |
| | ಅವಳು–ತಿನ್ನುತ್ತಾಳೆ | ತಿನ್ನುತ್ತಾರೆ | ತಿಂದಳು | ತಿಂದರು | ತಿನ್ನುವಳು | ತಿನ್ನುವರು |
| | ಅದು–ತಿನ್ನುತ್ತದೆ | ತಿನ್ನುತ್ತವೆ | ತಿಂದಿತು | ತಿಂದವು | ತಿನ್ನುವುದು | ತಿನ್ನುವುವು |
| ಮಧ್ಯಮ ಪುರುಷ | ನೀನು–ತಿನ್ನುತ್ತೀಯೆ | ತಿನ್ನುತ್ತೀರಿ | ತಿಂದೆ | ತಿಂದಿರಿ | ತಿನ್ನುವೆ | ತಿನ್ನುವಿರಿ |
| ಉತ್ತಮ ಪುರುಷ | ನಾನು–ತಿನ್ನುತ್ತೇನೆ | ತಿನ್ನುತ್ತೇವೆ | ತಿಂದೆನು | ತಿಂದೆವು | ತಿನ್ನುವೆನು | ತಿನ್ನುವೆವು |

ಈ ಮೇಲಿನ ಪಟ್ಟಿಯಲ್ಲಿ 'ತಿನ್ನು' ಎಂಬ ಧಾತುವು ವರ್ತಮಾನಕಾಲ, ಭೂತಕಾಲ ಮತ್ತು ಭವಿಷ್ಯತ್ಕಾಲಗಳಲ್ಲಿ, ಏಕವಚನ, ಬಹುವಚನ, ಪ್ರಥಮ ಪುರುಷ, ಮಧ್ಯಮ ಪುರುಷ, ಉತ್ತಮ ಪುರುಷಗಳಲ್ಲಿ ಬಳಕೆಯಾಗಿರುವುದನ್ನು ಗಮನಿಸಿದಿರಿ. ಇದೇ ರೀತಿಯಲ್ಲಿ ಇತರ ಧಾತುಗಳನ್ನು ಬಳಸಿ, ಪ್ರಯೋಗ ಮಾಡುವುದನ್ನು ಅಭ್ಯಾಸ ಮಾಡಿರಿ.

## ಭಾಷಾಭ್ಯಾಸ

### ಅ. ಕೊಟ್ಟಿರುವ ಪದಗಳನ್ನು ಸೂಚನೆಯಂತೆ ಬದಲಾಯಿಸಿ.

೧. ಆಡಿದಳು – ಇದನ್ನು ವರ್ತಮಾನಕಾಲಕ್ಕೆ ಬದಲಿಸಿ.

೨. ನೋಡವರು – ಇದನ್ನು ಏಕವಚನಕ್ಕೆ ಬದಲಿಸಿ.

೩. ತಿಂದಿತು – ಇದರ ಮೂಲರೂಪ ಬರೆಯಿರಿ.

೪. ಬರುವುದು – ಇದನ್ನು ಭೂತಕಾಲಕ್ಕೆ ಬದಲಾಯಿಸಿ.

### ಆ. ಇವುಗಳ 'ಧಾತು' ರೂಪ ಬರೆಯಿರಿ.

**ಮಾದರಿ :** ಬಂದರು – ಬರು

೧. ಕುಣಿವಳು – ____________

೨. ಕುಡಿಯಿತು – ____________

೩. ಬರೆವಳು – ____________

೪. ಬಂದನು – ____________

೫. ಹೋಗುವರು – ____________

### ಇ. ಓದಿಗೆ ಮನ್ನಣೆ

೧. ಕನ್ನಡ ನಾಡು–ನುಡಿಯನ್ನು ವರ್ಣಿಸುವ ಕನ್ನಡ ಗೀತೆಗಳನ್ನು ಸಂಗ್ರಹಿಸಿ, ಕೇಳಿರಿ.

೨. ಕನ್ನಡಕ್ಕೆ ಸಂಬಂಧಿಸಿದ ಹಾಡುಗಳನ್ನು ಗುಂಪಾಗಿ ಹಾಡಿರಿ.

೩. ಕನ್ನಡಕ್ಕೆ ಹಿರಿಯರು ಸಲ್ಲಿಸಿದ ಸೇವೆಯನ್ನು ಪುಸ್ತಕಗಳಿಂದ ಓದಿ ತಿಳಿಯಿರಿ.

### ಈ. ಶುಭನುಡಿ

೧. ತಾಯಿ–ತನ್ನೂರುಗಳು ಸ್ವರ್ಗಕ್ಕಿಂತಲೂ ಮಿಗಿಲು.

೨. ನಮ್ಮ ನಾಡು–ನುಡಿಗೆ ಗೌರವ ಸಲ್ಲಿಸಬೇಕಾದ್ದು ನಮ್ಮ ಪ್ರಥಮ ಕರ್ತವ್ಯ.

೩. ಕನ್ನಡ ನಾಡಿನಲ್ಲಿ ಕನ್ನಡವೇ ರಾಜ–ರಾಣಿ ಎಲ್ಲವೂ.

★★★★★

@KTBS NOT TO BE REPUBLISHED

# ೩. ನನ್ನ ರಟ್ಟೆಯ ಬಲ

– ಬುದ್ದಣ್ಣ ಹಿಂಗಮಿರೆ

ನನಗೆ ಹಂಬಲವೊಂದೆ
ದುಡಿದೆ ದುಡಿವುದೆ ಸತತ
ಲೆಕ್ಕಿಸದೆ ದುಃಖವನು
ಎಲುಬು, ಕಬ್ಬಿಣದಂತೆ ಗಟ್ಟಿಗೊಳಲಿ

ಈ ಹಗಲು ಇನ್ನಷ್ಟು ಉದ್ದವಾಗಲಿ,
ಮಣ್ಣಿನಲಿ, ಕಣ್ಣಿನಲಿ
ಗದ್ದೆಯಲಿ, ಗೆಡ್ಡೆಯಲಿ
ಸುರಿಸುವೆನು ಬೆವರು ಹೊಳೆ
ನಾ ದುಡಿವ ನಾಡ ನೆಲ ಹಿರಿದಾಗಲಿ!
ನನ್ನ ಹೆಮ್ಮೆಗೆ ಸದಾ ಗರಿಯೊಡೆಯುತಿರಲಿ,

ನೆಲಕೆ ಗೆಯ್ಯುವ ಕರ್ಮ
ನನ್ನ ಜೀವನ ಧರ್ಮ
ಅಖಂಡ ಕಾಯಕ ತಪಸು
ಮಣ್ಣ ಕಣ ಕಣ ನನ್ನ ಸಿರಿಯಾಗಲಿ

ದುಡಿವುದೊಂದೇ ನಿರಂತರ ಛಲವಾಗಲಿ
ನನ್ನ ಪ್ರಾಮಾಣಿಕತೆಗೆ
ಈ ನೆಲ–ಜಲ–ಬಾನು
ತಕ್ಕಂತೆ ಫಲ ನೀಡಲಿ
ನನ್ನ ರಟ್ಟೆಯ ಬಲವು ಹಿಗ್ಗುತಿರಲಿ!

©KTBS NOT TO BE REPUBLISHED

## ಕೃತಿಕಾರರ ಪರಿಚಯ



**ಡಾ. ಬುದ್ದಣ್ಣ ಹಿಂಗಮಿರೆ :** ಬುದ್ದಣ್ಣ ಹಿಂಗಮಿರೆ ಅವರು **೧೯೩೩ ರಲ್ಲಿ ಬೆಳಗಾವಿ ಜಿಲ್ಲೆಯ ರಾಜಾಪೂರದ ಆರಗದಲ್ಲಿ** ಜನಿಸಿದರು. ಇವರು ಅಧ್ಯಾಪಕರಾಗಿ, ರಶಿಯನ್ ಭಾಷೆಯ ಸಂದರ್ಶಕ ಪ್ರಾಧ್ಯಾಪಕರಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ. ಇವರು **ಉದಯರಾಗ, ಗುಬ್ಬಿಯ ಹಾಡು, ಹುಲ್ಲುಗೆಜ್ಜೆ, ಶಬ್ದ ರಕ್ತ ಮತ್ತು ಮಾಂಸ, ಹದ್ದುಗಳ ಹಾಡು** ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ **ಸೋವಿಯತ್ ಲ್ಯಾಂಡ್ ನೆಹರು ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ, ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ**ಗಳು ಲಭಿಸಿವೆ.

## ಅಭ್ಯಾಸ

### ಅ. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

೧. ರೈತನ ಹಂಬಲ ಯಾವುದು?

೨. ರೈತನ ನಿರಂತರ ಛಲ ಯಾವುದು?

೩. ರೈತನು ಯಾವುದಕ್ಕೆ ತಕ್ಕಫಲ ನೀಡಲೆಂದು ಆಶಿಸುತ್ತಾನೆ?

೪. ನಾಡನೆಲ ಏನಾಗಲೆಂದು ರೈತ ಹಂಬಲಿಸುತ್ತಾನೆ?

೫. ರೈತನು ಯಾವುದು ಸಿರಿಯಾಗಲಿ ಎನ್ನುತ್ತಾನೆ?

★★★★★

@KTBS NOT TO BE REPUBLISHED

# ೪. ಮೆಚ್ಚಿನ ಗೊಂಬೆ

**– ಸಮಿತಿ ರಚನೆ**

ಅಮ್ಮ ನಂಗೆ ಪುಟ್ಟದೊಂದು ಗೊಂಬೆ ತಂದ್ಕೊಡೆ
ಗೊಂಬೆ ಜೊತೆ ಆಡುವೆ, ಆಡಿ ಪಾಡಿ ನಲಿಯುವೆ



ಗೊಂಬೆಯೆಂದರೆ ಮಕ್ಕಳಿಗೆ ಬಲು ಪ್ರೀತಿ. ಚಿಕ್ಕಮಕ್ಕಳಿಗೆ ಪ್ರಮುಖ ಆಸ್ತಿ. ದೊಡ್ಡವರೂ ಸಹ ಗೊಂಬೆಗಳನ್ನು ಆಡಿಸಿ ನಲಿಯುತ್ತಾರೆ. ಹಠ ಮಾಡಿ ಅಳುತ್ತಿದ್ದ ಮಕ್ಕಳಿಗೆ ಗೊಂಬೆ ಕೊಟ್ಟರೆ ಸಾಕು ಗಪ್‌ಚುಪ್. ಗೊಂಬೆಗಳು ಮಕ್ಕಳ ಕೈಯಲ್ಲಿ ಮಕ್ಕಳಾಗಿ ಬಿಡುತ್ತವೆ.

ಗೊಂಬೆ ಕಂಡರೆ ಸಾಕು, ಮಕ್ಕಳ ಮುಖದಲ್ಲಿ ನಗು. ಚಿಕ್ಕ ಮಕ್ಕಳು ಎತ್ತಿ, ಬಿಸಾಡಿ, ನೂಕಿ, ಎಳೆದು, ಜಗ್ಗಿ ನಲಿಯುತ್ತಾರೆ. ಸ್ವಲ್ಪ, ಸ್ವಲ್ಪ ದೊಡ್ಡವರಾದಂತೆ ಗೊಂಬೆಗಳನ್ನು ಮುದ್ದಿಸುತ್ತಾರೆ. ತಾಯಿ ತಮ್ಮನ್ನೆಲ್ಲ ಹೇಗೆ ಪೋಷಣೆ ಮಾಡುತ್ತಾಳೋ ಹಾಗೆಯೇ ಮಕ್ಕಳು ಗೊಂಬೆಗಳನ್ನು ನೋಡಿಕೊಳ್ಳುತ್ತಾರೆ. ಅವುಗಳಿಗೆ ತಿಂಡಿ ತಿನ್ನಿಸುವುದು, ಸ್ನಾನ ಮಾಡಿಸುವುದು, ಮಲಗಿಸಿ ಲಾಲಿ ಹಾಡುವುದು, ಬಟ್ಟೆ ತೊಡಿಸುವುದು, ಶೃಂಗಾರ ಮಾಡುವುದು–ಹೀಗೆ ಎಲ್ಲವನ್ನೂ ಪ್ರೀತಿಯಿಂದ ಮಾಡುತ್ತಾರೆ.

ಮಕ್ಕಳ ಕೈಯಲ್ಲಿ ಗೊಂಬೆಗಳಿಗೆ ಜೀವ ಬರುತ್ತದೆ. ಯಾರಾದರೂ ತಮ್ಮ ಗೊಂಬೆಗಳಿಗೆ ಕೀಟಲೆ ಮಾಡಿದರೆ ಮಕ್ಕಳು ಸುಮ್ಮನಿರುವುದಿಲ್ಲ. ಗೊಂಬೆಗೆ ನೋವಾಯಿತೆಂದು ಎತ್ತಿ ಮುದ್ದಾಡಿ ಸಮಾಧಾನ ಮಾಡುತ್ತಾರೆ. ಕೈಜಾರಿದ ಗೊಂಬೆ ಕೆಳಕ್ಕೆ ಬಿದ್ದರಂತೂ ಮಕ್ಕಳು ಅತ್ತೇ ಬಿಡುತ್ತಾರೆ! ಅದನ್ನು ಎತ್ತಿಕೊಂಡು ಹಾಡು ಹೇಳಿ ಸಮಾಧಾನ ಮಾಡುತ್ತಾರೆ.

ಅಳಬೇಡ ಅಳಬೇಡ ಗೊಂಬವ್ವ ನೀನು
ಜರತಾರಿ ಲಂಗ ಕೊಡಿಸುವೆನು ನಾನು

@KTBS NOT TO BE REPUBLISHED

ಗೊಂಬೆಗಳನ್ನು ವಿವಿಧ ವಸ್ತುಗಳಿಂದ ತಯಾರಿಸುತ್ತಾರೆ. ಮರ, ಮಣ್ಣು, ಪ್ಲಾಸ್ಟಿಕ್, ರಬ್ಬರ್, ಪಿಂಗಾಣಿ, ಬಟ್ಟೆ, ಹತ್ತಿ, ಬಿದಿರು, ಕಾಗದಗಳಿಂದ ಗೊಂಬೆಗಳು ಸಿದ್ಧವಾಗುತ್ತವೆ. ಇತ್ತೀಚೆಗೆ ಗೊಂಬೆಗಳು ವಿವಿಧ ರೂಪಗಳನ್ನು ಪಡೆದಿವೆ. ಮನುಷ್ಯ, ಪ್ರಾಣಿ, ಪಕ್ಷಿ, ಕೀಟ ಎಲ್ಲ ರೂಪಗಳಲ್ಲೂ ಜನ್ಮತಾಳಿವೆ. ವಿವಿಧ ವಸ್ತುಗಳಲ್ಲೂ ಗೊಂಬೆಯ ರೂಪ! ಗೊಂಬೆಯ ಪೆನ್ಸಿಲ್, ಗೊಂಬೆಯ ಪೆನ್ನು, ಗೊಂಬೆಯ ತಿಂಡಿ-ತಿನಿಸುಗಳು ಹೀಗೆ ಎಲ್ಲದರಲ್ಲೂ ಗೊಂಬೆಗಳು ಕಾಣಸಿಗುತ್ತವೆ.



ಜಾತ್ರೆ ಉತ್ಸವಗಳಲ್ಲಿ ಗೊಂಬೆಗಳದ್ದೇ ಆಕರ್ಷಣೆ. ವೈವಿಧ್ಯಮಯ ಗೊಂಬೆಗಳು ಅಂಗಡಿಗಳಲ್ಲಿ ಕೈ ಬೀಸಿ ಕರೆಯುತ್ತವೆ. ಉತ್ಸವಗಳಲ್ಲಿ ಕುಣಿಯುವ ಗೊಂಬೆಗಳನ್ನು ನೋಡುವುದು ಎಲ್ಲಿಲ್ಲದ ಆನಂದ! ಅವುಗಳನ್ನು ನೋಡಿದರೆ ಹರ್ಷ-ನಗು ಒಟ್ಟಿಗೇ ಬರುತ್ತವೆ. ಜೋಕರ್ ಗೊಂಬೆಗಳಂತೂ ತಾನೂ ನಗುತ್ತ ಎಲ್ಲರನ್ನೂ ನಗಿಸುತ್ತವೆ.

ನಮ್ಮ ನಾಡಹಬ್ಬ ದಸರಾದಲ್ಲಿ ಮನೆ-ಮನೆಗಳಲ್ಲೂ ಗೊಂಬೆಗಳನ್ನು ಅಲಂಕರಿಸುತ್ತಾರೆ. ಅಲಂಕರಿಸಿದ ನೂರಾರು ಗೊಂಬೆಗಳನ್ನು ಒಟ್ಟಿಗೆ ನೋಡುವುದೇ ಒಂದು ಹಬ್ಬ! ಅವುಗಳ ಶೃಂಗಾರ, ಜೋಡಣೆ ಅಲಂಕಾರ ಬಲು ಸುಂದರ. ಸ್ಪ್ರಿಂಗ್ ಗೊಂಬೆಗಳು, ಕೀ ಗೊಂಬೆಗಳು, ಕೀಲು ಗೊಂಬೆಗಳು, ಯಂತ್ರ ಗೊಂಬೆಗಳು, ಸಣ್ಣ ದೊಡ್ಡ ವಿವಿಧ ರಂಗಿನ ಗೊಂಬೆಗಳು, ವಿವಿಧ ಆಟಗಳ ಮೂಲಕ ಸಂತೋಷಕೊಡುತ್ತವೆ. ನಿಜವಾಗಿ ಜೀವವಿದ್ದವುಗಳಂತೆ ವರ್ತಿಸುತ್ತವೆ.

ಎಲ್ಲರ ಮನೆಗಳಲ್ಲೂ ಗೊಂಬೆಗಳು ಸ್ಥಾನ ಪಡೆದಿವೆ. ಗೊಂಬೆಗಳು ಮನುಷ್ಯನಿಗೆ ಅನೇಕ ರೀತಿಯಲ್ಲಿ ಜೀವನ ಪಾಠವನ್ನೂ ಹೇಳುತ್ತವೆ! ಗೊಂಬೆಗಳು ಯಾರ ಹೊಗಳಿಕೆಗೂ ತೆಗಳಿಕೆಗೂ ಜಗ್ಗುವುದಿಲ್ಲ.

ಆಡಿಸಿ ನೋಡು ಬೀಳಿಸಿ ನೋಡು ಉರುಳಿಹೋಗದು
ಏನೇ ಬರಲಿ ಯಾರಿಗೂ ಸೋತು ತಲೆಯಬಾಗದು

NOT TO BE REPUBLISHED @KTBS

## ಅಭ್ಯಾಸ

### ಅ. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

೧. ಗೊಂಬೆಗಳನ್ನು ಯಾವ ಯಾವ ವಸ್ತುಗಳಿಂದ ತಯಾರಿಸುತ್ತಾರೆ?
೨. ಗೊಂಬೆಗೆ ನೋವಾದರೆ ಮಕ್ಕಳು ಏನು ಮಾಡುತ್ತಾರೆ?
೩. ಅಳುವ ಗೊಂಬೆಗೆ ಮಕ್ಕಳು ಏನೆಂದು ಹಾಡಿ ಸಮಾಧಾನ ಮಾಡುತ್ತಾರೆ?
೪. ಯಾವ ಹಬ್ಬದಂದು ಮನೆಗಳಲ್ಲಿ ಗೊಂಬೆಗಳನ್ನು ಅಲಂಕರಿಸುತ್ತಾರೆ?
೫. ಗೊಂಬೆಗಳು ಯಾವ ಯಾವ ರೂಪಗಳಲ್ಲಿ ಜನ್ಮತಾಳಿವೆ?

★ ★ ★ ★ ★

# ೫. ಹಿನ್ನುಡಿ

– ದಿನಕರ ದೇಸಾಯಿ

ನನ್ನ ಭಾವದ ಕವನ,
ನನ್ನ ಗಾನದ ತನನ,
ನನ್ನದೆಂಬುವ ಜಂಬ ಸಾಕು ದೇವಾ.
ನಿನ್ನ ಕೃಪೆಯಿಂದಲೇ
ಬನ್ನಿ ಗಿಡ ಹೂ ಬಿಡಲು,
ನಿನ್ನ ಸೇವೆಗೆ ನೀನೆ ತಂದೆ ಹೂವ !




ಹಕ್ಕಿಗಳ ಇಂಚರವು,
ಚುಕ್ಕಿ ಮಿಂಚುವ ತೆರವು,
ಉಕ್ಕಿ ಮೊರೆಯುವ ತೆರೆಯು ನಿನ್ನ ಕವನ.
ನನ್ನದೆಂಬುವ ಗೀತ
ನಿನ್ನದೇ ಸಂಗೀತ,
ಎಲ್ಲೆಲ್ಲಿಯೂ ನಿನ್ನ ಭಾವ-ಪವನ.

ನನ್ನ ಕನ್ನಡ ನುಡಿಗೆ
ನಿನ್ನ ಹಿನ್ನುಡಿಯಿರಲು,
ನನ್ನದೆಂಬುದು ತಾನೆ ಕನ್ನಡಿಯ ಬಿಂಬ;
ಪೊಡವಿಯಲಿ ನಾಲ್ದೆಸೆಗೆ
ನೀನೆ ಹಾಡುತಲಿರಲು,
ನಿನ್ನ ಭಾವವೆ ನನ್ನ ನುಡಿ-ಗುಡಿಯ ಕಂಬ !

@KTBS NOT TO BE REPUBLISHED

## ಕೃತಿಕಾರರ ಪರಿಚಯ



**ದಿನಕರ ದೇಸಾಯಿ (೧೯೦೯ - ೧೯೮೨) :** ಕನ್ನಡದ ಪ್ರಮುಖ ಸಾಹಿತಿಗಳಲ್ಲೊಬ್ಬರು. "**ಚುಟುಕ ಬ್ರಹ್ಮ**"ನೆಂದೇ ಖ್ಯಾತರು. **ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲೂಕಿನ ಅಲಗೇರಿ** ಎಂಬ ಪುಟ್ಟ ಹಳ್ಳಿಯಲ್ಲಿ ಜನಿಸಿದ ದಿನಕರರು ತಮ್ಮ ಪ್ರಾಥಮಿಕ, ಪ್ರೌಢಶಿಕ್ಷಣಗಳನ್ನು ಹಳ್ಳಿಯಲ್ಲೇ ಪೂರೈಸಿ ಮೆಟ್ರಿಕ್ ಓದಲು ಧಾರವಾಡಕ್ಕೆ ಹೋದಾಗ **ಬಿಎಂಶ್ರೀ** ಅವರ "ಇಂಗ್ಲಿಷ್ ಗೀತಗಳು" ಕವನಸಂಕಲನವನ್ನು ಓದಿ ಬೆರಗಾದರು. ನಂತರ ಕಾವ್ಯಕ್ಷೇತ್ರಕ್ಕೆ ಪ್ರವೇಶಿಸಿದ ದಿನಕರರು ತಮ್ಮ ಜೀವಿತದಲ್ಲಿ ಬರೆದ ಕವಿತೆಗಳು ನೂರಾರು, ಚುಟುಕಗಳು ಸಾವಿರಾರು. ಶಿಕ್ಷಣ ಕ್ಷೇತ್ರದಲ್ಲಿ ಮಹತ್ತರ ಸಾಧನೆ ಮಾಡಿದರು, ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದರು. ಸಂಸದರಾಗಿಯೂ ಚುನಾಯಿತರಾಗಿ ರಾಜಕಾರಣದಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸಿದರು.

**ನನಗೇಕೆ ಷಷ್ಟ್ಯಬ್ದಿ, ಸಾಕು ಬರವಣಿಗೆ**
**ಕವಿಗೆ ಬೇಕಾಗಿಲ್ಲ ಯಾವ ಮೆರವಣಿಗೆ**
**ಮೂಲೆಯಲಿ ಕೂತು ಬರೆದರೆ ಒಂದು ಪದ್ಯ**
**ತಾಯ್ನುಡಿಗೆ ಅರ್ಪಿಸಿದ ಹಾಗೆ ನೈವೇದ್ಯ**

- ಎಂಬ ಚುಟುಕದಲ್ಲಿ ಅವರ ಬದುಕಿನ ಧ್ಯೇಯ-ಧರ್ಮಗಳು ಸ್ಪಷ್ಟವಾಗುತ್ತವೆ.

@KTBS NOT TO BE REPUBLISHED

## ಅಭ್ಯಾಸ

### ಅ. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

೧. ಯಾವ ಜಂಬ ತನಗೆ ಬೇಡ ಎಂದು ಕವಿ ಹೇಳುತ್ತಾರೆ?

೨. "ನಿನ್ನ ಸೇವೆಗೆ ನೀನೆ ತಂದೆ ಹೂವ" - ಈ ಸಾಲಿನ ಅರ್ಥವನ್ನು ವಿವರಿಸಿ.

೩. ಪ್ರಕೃತಿಯ ಯಾವ್ಯಾವ ಸಂಗತಿಗಳು ದೇವರ ಸಂಗೀತವಾಗಿವೆ?

೪. ಯಾವುದು ಕನ್ನಡಿಯ ಬಿಂಬ?

೫. "ಹಿನ್ನುಡಿ" ಕವಿತೆಯ ಒಟ್ಟು ಭಾವವೇನು ಎಂಬುದನ್ನು ವಿವರಿಸಿ.

★★★★★